بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 35

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಸೆಪ್ಟೆಂಬರ್ 2021, 02 ತಬೂಕ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
23 ಮುಹರ್ರಮ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

لَقَدْ كَفَرَ الَّذِيْنَ قَالُوْٓا اِنَّ اللّٰهَ ثَالِثُ ثَلٰثَةٍ ۘ
وَمَا مِنْ اِلٰهٍ اِلَّآ اِلٰهٌ وَّاحِدٌ ۗ وَاِنْ لَّمْ يَنْتَهُوْا
عَمَّا يَقُوْلُوْنَ لَيَمَسَّنَّ الَّذِيْنَ كَفَرُوْا
مِنْهُمْ عَذَابٌ اَلِيْمٌ (المائدة:74)

(ಅಲ್‌ಮಾಇದ: 74)

ಅಂದರೆ: 'ಖಂಡಿತವಾಗಿಯೂ ಅಲ್ಲಾಹನು ಮೂವರಲ್ಲಿ ಒಬ್ಬನು' ಎಂದು ಹೇಳುವವರು ನಿಸ್ಸಂದೇಹವಾಗಿಯೂ ಅವಿಶ್ವಾಸಿಗಳಾಗಿದ್ದಾರೆ. ವಾಸ್ತವದಲ್ಲಿ, ಒಬ್ಬನೇ ಒಬ್ಬ ದೇವನ ಹೊರತು ಬೇರೆ ದೇವನಿಲ್ಲ. ತಾವು ಹೇಳುವುದನ್ನು ಅವರು ನಿಲ್ಲಿಸದಿದ್ದರೆ ಖಂಡಿತವಾಗಿಯೂ ಅವರಲ್ಲಿ ಅವಿಶ್ವಾಸಿಗಳಿಗೆ ಯಾತನಾಮಯವಾದ ಶಿಕ್ಷೆ ಬಂದೆರಗುವುದು.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಸದಖಾ (ದಾನ) ನೀಡಲು ಮುಂದಾಗಲು ಪ್ರೇರಣೆ

(1419) ಹಝ್‌ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ವ್ಯಕ್ತಿಯೊಬ್ಬನು ರಸೂಲುಲ್ಲಾಹ್(ಸ) ರವರ ಬಳಿಗೆ ಬಂದು ಹೇಳಿದನು. ಓ ಪ್ರವಾದಿವರ್ಯರೇ ಪುಣ್ಯ ಗಳಿಸಲು ಯಾವ ಸದಖಾ (ದಾನ) ಮಹತ್ವದ್ದಾಗಿದೆ? ಅವರು ನುಡಿದರು. ಅದಾವುದೆಂದರೆ ನೀನು ಆರೋಗ್ಯವಂತನಾಗಿರಬೇಕು. ಸಂಪತ್ತು ಹೊಂದುವ ಇಷ್ಟವುಳ್ಳವನಾಗಬೇಕು ಮತ್ತು ಜಿಪುಣನಾಗಿರಬೇಕು. ಬಡತನದ ಹೆದರಿಕೆ ಮನದಲ್ಲಿರಬೇಕು. ಸಂಪತ್ತುಗಳಿಸುವ ಆಸೆ ಹೊಂದಿರಬೇಕು. ಅದಾಗ್ಯೂ ಸದಖಾ (ದಾನ) ನೀಡಲು ಮರಣ ಹೊಂದಲು ಸಮೀಪವಾಗುವಷ್ಟು ತಡ ಮಾಡಬಾರದು, ಮತ್ತು ನೀನು ಅವನು ಇಷ್ಟು ಕೊಡಬೇಕು. ಅವನಿಗೆ ಇಷ್ಟು ಕೊಡಬೇಕು ಎಂಬ ಲೆಕ್ಕದಲ್ಲಿಯೇ ಇರಬಾರದು. ಅದಾಗ್ಯೂ ಅದು ಅವನದ್ದಾಗಿರುತ್ತದೆ.

### ಉದಾರ ಹಸ್ತ ತಾತ್ಪರ್ಯ ಕೊಡುಗೈ ದಾನಿ ಎಂದಾಗಿದೆ

(1420) ಹಝ್‌ರತ್ ಆಯಿಶಾ(ರ) ವರದಿ ಮಾಡುತ್ತಾರೆ. ನಬಿ(ಸ) ರವರ ಕೆಲ ಧರ್ಮ ಪತ್ನಿಯರು ನಬಿ(ಸ) ರೊಡನೆ ಹೇಳಿದರು. ನಮ್ಮ ಪೈಕಿ ಯಾರು ಮೊದಲು ನಿಮ್ಮನ್ನು ಭೇಟಿಯಾಗುವರು? ಅವರು ನುಡಿದರು. ಯಾರ ಹಸ್ತ ಉದ್ಧವಾಗಿರುವುದೋ ಅವರು ಎಂದರು. ಆಗ ಒಂದು ಕಟ್ಟಿಗೆ ಹಿಡಿದು ಅವರು ತಮ್ಮ ತಮ್ಮ ಕೈಗಳನ್ನು ಅಳತೆ ಮಾಡಲು ಪ್ರಾರಂಭಿಸಿದರು. ಹಝ್‌ರತ್ ಸೌದಾ(ರ) ಅವರ ಕೈ ಎಲ್ಲರಿಗಿಂತ ಉದ್ಧವಾಗಿತ್ತು. ನಮಗೆ ನಂತರ ತಿಳಿಯಿತು, ಕೈ ಉದ್ಧವಿರುವುದೇನೆಂದರೆ ಅದರ ಅರ್ಥ ಯಾರು ದಾನ ಮಾಡುವುದರಲ್ಲಿ ಮುಂದಾಗುವರು. ಅವರು ಎಂದು ಹಾಗಾಗಿ ನಮ್ಮ ಪೈಕಿ ಸದಖಾ (ದಾನ) ಮಾಡುವುದರಲ್ಲಿ ಮುಂದಾಗಿದ್ದ. ಧರ್ಮಪತ್ನಿಯು ಮೊದಲು ಹಝ್‌ರತ್ ರಸೂಲುಲ್ಲಾಹ್(ಸ) ರೊಡನೆ ಕೂಡಿಕೊಂಡರು. ಅವರಿಗೆ ಸದಖಾ ಮಾಡುವುದು ಬಹುಪ್ರಿಯ ಕರ್ಮವಾಗಿತ್ತು. **(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಝ್ಝಕಾತ್, ಮುದ್ರಣ 2008 ಖಾದಿಯಾನ್)**

**ಅಲ್ಲಾಹನು ಮನುಷ್ಯನಿಗೆ ನೀಡಿದ ಗುಣಲಕ್ಷಣಗಳನ್ನು ಉಪಯೋಗಿಸಿಕೊಂಡರೆ ಅವನ ಪ್ರಿಯನಾಗಬಹುದು.**

**ಯಾವ ವ್ಯಕ್ತಿ ತನ್ನನ್ನು ವಂಚಿತನೆಂದು ಭಾವಿಸಕೂಡದು. ನಮಗೆ ಭಾಗ್ಯ ದೊರೆಯುವುದಿಲ್ಲ ಎಂದು ಭಾವಿಸಲು ಅಲ್ಲಾಹನೇನು ಪಟ್ಟಿ ಪ್ರಕಟಿಸಿದನೇ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನಾನು ನಿಮಗೆ ನಿಶ್ಚಯವಾಗಿ ಹೇಳುವೆನು. ಅಲ್ಲಾಹನು ನಮ್ಮ ಕಠಿಣತೆಗಳನ್ನು ಸರಳಗೊಳಿಸಿದ್ದಾನೆ. ಏಕೆಂದರೆ ನಮ್ಮ ವ್ಯವಹಾರಗಳ ಮಾರ್ಗಗಳು ಬೇರೆಯೇ ಆಗಿವೆ. ನಮ್ಮಲ್ಲಿ ಸೊಂಟ ಬಗ್ಗಿಸುವುದು, ಉಗುರು ಬೆಳೆಸುವುದು, ನೀರಿನಲ್ಲಿ ನಿಲ್ಲುವುದು, ಕಾಡಿನಲ್ಲಿ ಸನ್ಯಾಸಿಯಾಗಿ ಬಾಳುವುದು, ಕೈಗಳನ್ನು ಶುಷ್ಕಗೊಳಿಸಿಕೊಳ್ಳುವುದು ಮತ್ತು ಮುಖದ ಭಂಗಿ ನಶಿಸುವಂತೆ ಮಾಡಿಕೊಳ್ಳುವಂತಹ ಯಾವ ವಿಧಾನಗಳು ಇಲ್ಲ. ಅವರು ಹೀಗೆ ಮಾಡಿದರೆ ದೇವನು ಒಲಿಯುವನು ಎಂದು ಭಾವಿಸಿಕೊಳ್ಳುತ್ತಾರೆ. ಆದರೆ ನಾನು ತಿಳಿದಿರುವೆನು. ದೇವನು ಒಲಿಯುವುದು ಇರಲಿ ಇದ್ದ ಮಾನವೀಯತೆ ನಶಿಸಿಹೋಗುತ್ತದೆ. ಆದರೆ ನಮ್ಮ ವಿಧಾನಗಳು ಹೀಗಿಲ್ಲ. ಬದಲು ಅತ್ಯಂತ ಸರಳ ಮಾರ್ಗವನ್ನು ತೋರಿಸಿಕೊಟ್ಟಿದೆ. ಅದು ನೇರ ಮಾರ್ಗವಾಗಿದೆ. ಅದನ್ನು ಅಲ್ಲಾಹನು ಹೀಗೆ ವಿವರಿಸಿರುವನು. ಇಹಿದಿನಸಿರಾತಲ್ ಮುಸ್ತಖೀಮ್ (ಅಲ್‌ಫಾತಿಹಾ–6) ಅಲ್ಲಾಹನು ಈ ದುಆ (ಪ್ರಾರ್ಥನೆ) ಕಲಿಸಿ ಮಾರ್ಗವೇನು ತೋರಿಸಿಕೊಡಲಿಲ್ಲ ಎಂದೇನಲ್ಲ. ಬದಲು ದುಆ (ಪ್ರಾರ್ಥನೆಯ) ಜೊತೆಯಲ್ಲಿ ಎಲ್ಲವನ್ನು ಪ್ರಸ್ತುತಪಡಿಸಿದ್ದಾನೆ. ಅಂದ ಹಾಗೆ ಅದರ ಮುಂದಿನ ವಚನದಲ್ಲಿಯೇ ಸ್ವೀಕೃತಿಯ ಸಂಕೇತಗಳನ್ನು ನೀಡಿದ್ದಾನೆ. ಝಾಲಿಕಲ್ ಕಿತಾಬು (ಅಲ್‌ಬಖರ: 3) ಇದು ಎಂತಹ ಆಮಂತ್ರಣವಾಗಿದೆ ಎಂದರೆ ಆಮಂತ್ರಿಸುವ ಮೊದಲೇ ಎಲ್ಲ ಸಾಮಗ್ರಿಗಳು ಲಭ್ಯವಿದೆ. ಅಂತೂ ಮನುಷ್ಯನಿಗೆ ಗುಣಶಕ್ತಿಗಳು ನೀಡಲಾಗಿದೆಯೋ, ಮನುಷ್ಯನು ಅದನ್ನು ಉಪಯೊಗಿಸಿಕೊಂಡರೆ ನಿಶ್ಚಯವಾಗಿಯೂ ಅಲ್ಲಾಹನಿಗೆ ಪ್ರಿಯನಾಗಬಹುದು. ನಾನು ನಿಶ್ಚಿತರೂಪದಲ್ಲಿ ಹೇಳುವೆನು. ಈ ಸಮುದಾಯದಲ್ಲಿ ಗುಣಶಕ್ತಿಯುಳ್ಳವರು ಬಹಳಷ್ಟು ಜನರಿದ್ದಾರೆ. ಅವರ ಪ್ರಕಾರ ನಿಷ್ಠೆ ಮತ್ತು ಸತ್ಯದಿಂದ ಕೂಡಿದವರಾಗಿದ್ದಾರೆ. ಯಾವ ವ್ಯಕ್ತಿಯು ತನ್ನನ್ನು ವಂಚಿತನೆಂದು ಭಾವಿಸಬಾರದು. ನಮಗೆ ಯಾವ ಭಾಗವು ದೊರೆಯುವುದಿಲ್ಲ ಎನ್ನಲು ಅಲ್ಲಾಹನೇನು ಪಟ್ಟಿ ಪ್ರಕಟಿಸಿದನೇ. ಅಲ್ಲಾಹನು ಅತ್ಯಂತ ದಯಾವಂತನಾಗಿದ್ದಾನೆ. ಅವನ ದಯೆಯ ಸಮುದ್ರ ಬಹಳ ಆಳ ಉಳ್ಳದ್ದಾಗಿದೆ. ಅದು ಎಂದೂ ಅಂತ್ಯಗೊಳ್ಳುವುದಿಲ್ಲ. ಮತ್ತು ಅದು ಆನ್ವೇಷಿಸುವವನನ್ನು, ಬೇಡುವವನನ್ನು ಎಂದೂ ವಂಚಿತನನ್ನಾಗಿ ಮಾಡುವುದಿಲ್ಲ. ಆದುದರಿಂದ ನೀವು ರಾತ್ರಿಗಳಲ್ಲಿ ಎದ್ದು ಪ್ರಾರ್ಥಿಸಬೇಕಾಗಿದೆ ಮತ್ತು ಅವನ ಅನುಗ್ರಹಗಳನ್ನು ಬೇಡಬೇಕಾಗಿದೆ. ಪ್ರತಿ ನಮಾಝಿನಲ್ಲಿ ದುಆ ಮಾಡಲು ಹಲವು ಸಂದರ್ಭಗಳಿವೆ. ರುಕು, (ನಮಿಸುವುದು) ಖಿಯಾಮ್ (ನಿಲ್ಲುವಿಕೆ) ಖಅದ (ಕುಳಿತುಕೊಳ್ಳುವುದು) ಸಜ್‌ದಾ (ಸಾಷ್ಟಾಂಗ ಪ್ರಣಾಮ) ಇತ್ಯಾದಿ., ದಿನದಲ್ಲಿ ಐದು ಸಲ ನಮಾಝ್ ನಿರ್ವಹಿಸುತ್ತೇವೆ. ಇವೆಲ್ಲ ಪ್ರಾರ್ಥಿಸುವ ಸಂದರ್ಭಗಳೇ ಆಗಿವೆ. **(ಮಲ್ಫೂಝಾತ್ ಸಂಪುಟ–1, ಪುಟ–310 ಮುದ್ರಣ 2018 ಖಾದಿಯಾನ್)**

**ಪವಿತ್ರ ಖುರ್‌ಆನ್ ಅವತರಿಸಿದ ಮಹತ್ತರ ಉದ್ದೇಶ ಅದರ ಪರಿಪೂರ್ಣ ಮತ್ತು ಮನಮೋಹಕ ಶಿಕ್ಷಣವಾಗಿದೆ.**

**ಯಹೂದಿ ಒಬ್ಬರು ಹೇಳಿದನು. ನಿಮ್ಮ ಶರೀಅತ್ತಿನಲ್ಲಿ (ಧರ್ಮ ಸಂಹಿತೆ) ಮಾನವೀಯ ಜೀವನಕ್ಕೆ ಸಂಬಂಧಿಸಿದ ಯಾವ ಅಂಶವು ಬಿಡದಿರುವುದನ್ನು ಕಂಡು ಆಶ್ಚರ್ಯವಾಗುತ್ತದೆ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ಅ) ಸೂರಃ ಅಲ್‌ಹಿಜರ್ ವಚನ 3 **ರುಬಮಾ ಯವದ್ದುಲ್ಲಝೀನ ಕಫರೂ ಲೌ ಕಾನೂ ಮುಸ್ಲಿಮೀನ್** ನ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ: ಅವಿಶ್ವಾಸಿಗಳ ಬಯಕೆಯ ಕುರಿತು ವ್ಯಾಖ್ಯಾನಗಳು ತಮ್ಮ ವಿಭಿನ್ನ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿರುತ್ತಾರೆ. ಅವರು ಎಂದು ಮುಸಲ್ಮಾನನಾಗುವ ಬಯಕೆ ಹೊಂದಿದ್ದರು? ಕೆಲವು ಮುಸಲ್ಮಾನರು ವಿಜಯ ಪಡೆದ ಸಂದರ್ಭದಲ್ಲಿ ವಿವಶರಾಗಿ ಈ ಬಯಕೆಯನ್ನು ವ್ಯಕ್ತಪಡಿಸಿದರು. ಕೆಲವರು ಅಂತ್ಯ ದಿನಗಳ ಸಮೀಪದ ಕಾಲಘಟ್ಟದಲ್ಲಿ ತಾವು ಮುಸ್ಲಿಮ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂಬ ಬಯಕೆ ಹೊಂದಿರುತ್ತಾರೆ. ಕೆಲವರು ಇಸ್ಲಾಮ್ ಧರ್ಮದ ಪ್ರಗತಿಯ ಸಂದರ್ಭವನ್ನು ತಾತ್ಪರ್ಯವಾಗಿ ತೆಗೆದುಕೊಂಡಿದ್ದಾರೆ. ಅಂದರೆ ಇಸ್ಲಾಮ್ ಧರ್ಮದ ಪ್ರಗತಿಯನ್ನು ಕಂಡು ಆ

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرَّ السُّمُوْمِ عَدَاوَةُ الصُّلَحَاءِ

## ವಿವಾದದ ನಂತರ ಅಬ್ದುಲ್ ಹಕ್ ಅವರಿಗೆ ಅವಮಾನವಾಗಿಲ್ಲ ಎಂದು ನ್ಯಾಯಾಧೀಶರು ಪ್ರಮಾಣ ಮಾಡಿದರೆ ಮೌಲ್ವಿ ಅಬ್ದುಲ್ ಹಕ್ ಘಜ್ನವಿಗೆ ಐದು ನೂರು ರೂಪಾಯಿಗಳ ಬಹುಮಾನ

ಹಿಂದಿನ ಸಂಚಿಕೆಗಳಲ್ಲಿ ನಾವು ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ನಡುವೆ ಆದ ಮುಬಾಹಲ ಕುರಿತು ನಡೆದಿರುವ ಪತ್ರ ವ್ಯವಹಾರ, ಪತ್ರಿಕೆ ಪ್ರಕಟಣೆಯ ಬಗ್ಗೆ ವಿವರಿಸಿದೆವು. ಅಲ್ಲದೇ 27 ಮೇ 1893 ಅಮೃತ್ಸರದಲ್ಲಿ ನಡೆದ ಮುಬಾಹಲ ವಿಷಯವಾಗಿಯೂ ಸಂಕ್ಷಿಪ್ತ ವರದಿ ವಿವರಿಸಿದೆವು. ಮೌಲ್ವಿ ಅಬ್ದುಲ್ ಹಕ್ ಗಝ್ನವಿ ಹೇಳುತ್ತಿದ್ದರು. ಭವಿಷ್ಯವಾಣಿಯ ನಂತರ ಆಥಮ ಅವರ ಅವಧಿಯ ಒಳಗೆ ಮರಣ ಹೊಂದದಿರುವುದು. ಮುಬಾಹಲದಲ್ಲಿ ಅವರ ವಿಜಯದ ಸಂಕೇತವಾಗಿದೆ. ಆಥಮನ ಮರಣ ಹೊಂದದಿರುವುದು ಮಸೀಹ್ ಮೌಊದ್ ಅವರ ಮೇಲೆ ಮುಬಾಹಲದ ಫಲವಾಗಿ ದೊರೆತ ಶಾಪವಾಗಿದೆ. ಅವರು ಮುಬಾಹಲದಲ್ಲಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಶಾಪಕ್ಕಾಗಿ ಮತ್ತು ಅಪಮಾನಕ್ಕಾಗಿ ಮತ್ತು ದೇವಾನುಗ್ರಹಗಳಿಂದ ವಂಚಿತರಾಗಲು ಪ್ರಾರ್ಥಿಸಿದ್ದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಸವಿವರವಾಗಿ ತನ್ನ ಗ್ರಂಥಗಳಲ್ಲಿ ಅದನ್ನು ವಿವರಿಸಿರುತ್ತಾರೆ. ಮುಬಾಹಲ ನಂತರ ಅಲ್ಲಾಹನು ಅವರಿಗೆ ಅಸಂಖ್ಯಾತ ಅನುಗ್ರಹಗಳಿಂದ, ಕಾರುಣ್ಯಗಳಿಂದ ದಯಪಾಲಿಸಿರುತ್ತಾನೆ. ಹಾಗೂ ಇನ್ನೊಂದೆಡೆ ಅಬ್ದುಲ್ ಹಖ್ ಅವರು ಹಲವು ರೀತಿಯ ಅಪಮಾನ ಮತ್ತು ಶಾಪಕ್ಕೆ ಗುರಿಯಾಗಿರುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಅಬ್ದುಲ್ ಹಖ್ ಅವರಿಗಾಗಿ ಐದು ನೂರು ರೂಪಾಯಿಗಳ ಬಹುಮಾನ ನಿಗದಿಪಡಿಸಿದರು. ಯಾವನೆ ಒಬ್ಬ ನ್ಯಾಯವಂತನಾದವನು ಆಣೆ ಮಾಡಿ ಹೇಳಲಿ. ಮುಬಾಹಲ ನಂತರ ಅಬ್ದುಲ್ ಹಖ್ ಯಾವುದೇ ರೀತಿಯ ಅಪಮಾನಕ್ಕೆ ಗುರಿಯಾಗಿಲ್ಲ ಎಂದು. ಇಂದು ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅದೆ ಬಹುಮಾನದ ಪಂಥಹ್ವಾನ ಕುರಿತು ವಿವರಿಸುವೆವು ಅದು ಅವರು ಮೌಲ್ವಿ ಅಬ್ದುಲ್ ಹಖ್ ಗಝ್ನವಿಗೊಸ್ಕರ ನೀಡಿದ್ದರು. ಈ ಪಂಥಹ್ವಾನ ಕುರಿತು ಅವರು ನಾಲ್ಕು ಮಾತುಗಳನ್ನು ಮುಂದಿಟ್ಟರು. ಅದರಿಂದ ಅಬ್ದುಲ್ ಹಖ್ ರವರಿಗೆ ಆದ ಅಪಮಾನದ ಕುರಿತು ನಿಶ್ಚಿತ ಪುರಾವೆಗಳಾಗಿದ್ದವು. ಮತ್ತು ಕೊನೆಯಲ್ಲಿ ಅವರು ನುಡಿದರು ಯಾರಾದರು ಈ ವಿವರಗಳಲ್ಲಿ ಅಬ್ದುಲ್ ಹಖ್ ಅವರಿಗೆ ಅಪಮಾನ ಉಂಟಾಗಲಿಲ್ಲ. ಬದಲು ಗೌರವ ದೊರೆತಿದೆ ಎಂದಾದರೆ ನಾನು ಅಬ್ದುಲ್ ಹಖ್ ಗಝ್ನವಿ ಅವರಿಗೆ ಐದು ನೂರು ರೂಪಾಯಿಗಳು ಬಹುಮಾನ ರೂಪದಲ್ಲಿ ನೀಡುವೆನು. ಶರತ್ತೇನೆಂದರೆ ಆಣೆ ಮಾಡುವವನು ಒಂದು ವರ್ಷದವರೆಗೆ ದೈವಿಕ ಶಿಕ್ಷೆಯಿಂದ ಉಳದಿರಬೇಕು. ಅವರ ಅಧ್ಯಾಪನೆಗಳನ್ನು ನಾವು ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ. ಅವರು ನುಡಿದರು. "ಹೆಚ್ಚಿನವರು ಕೇಳುತ್ತಾರೆ. ಅಬ್ದುಲ್ ಹಖ್‌ನವರೊಂದಿಗೆ ಆದ ಮುಬಾಹಲದ ಪರಿಣಾಮವೇನಾಯಿತು. ಯಾವ ಪಕ್ಷದವರೆಗೆ ಅಪಮಾನ ಉಂಟಾಯಿತು. ಅದರ ಉತ್ತರವಾಗಿ ನಾವು ಪ್ರಬಲ ಕಾರಣ ಸಹಿತ ಎಲ್ಲರ ಮೇಲೆ ಸ್ಪಷ್ಟಪಡಿಸುತ್ತೇವೆ. ಅಬ್ದುಲ್ ಹಖ್ ಮತ್ತು ಅವರ ಗುಂಪಿನವರಿಗೆ ಅಪಮಾನ ಉಂಟಾಯಿತು. ಏಕೆಂದರೆ ಆ ಮುಬಾಹಲದ ನಂತರ ಎಂತಹ ಘಟನೆ ನಡೆದಿದೆ ಎಂದರೆ ಅದು ನಮ್ಮ ಗೌರವಕ್ಕೆ ಮತ್ತು ಅವರ ಅಗೌರವಕ್ಕೆ ಕಾರಣವಾಗಿದೆ.

### ಅಬ್ದುಲ್ ಹಖ್‌ರವರ ಮೇಲೆ ಮೊದಲನೆಯ ಅಪಮಾನವೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರಿಗಾಗಿ ಸೂರ್ಯ ಚಂದ್ರಗ್ರಹಣದ ದೃಷ್ಟಾಂತ ಗೋಚರಿಸಿತು.

1) ಅದರಲ್ಲಿ ನಮ್ಮ ಪರವಾಗಿ ಸೂರ್ಯ ಚಂದ್ರ ಗ್ರಹಣದ ದೃಷ್ಟಾಂತ ಗೋಚರಿಸಿತು. ಅದನ್ನು ನೋಡಿ ನೂರಾರು ಜನರು ನಮ್ಮ ಜಮಾಅತಿಗೆ ಸೇರಿಕೊಂಡರು. ಈ ದೃಷ್ಟಾಂತದಿಂದ ನಮಗೆ ಸಂತಸ ಮತ್ತು ವಿರೋಧಿಗಳಿಗೆ ದುಃಖ ಅಪಮಾನ ಉಂಟಾಗಿದೆ. ಅವರು ಆಣೆ ಮಾಡಿ ಹೇಳಲು ಸಿದ್ಧರಿದ್ದಾರೆಯೇ. ನಾವು ಮಹದಿ ಮಸೀಹನ ದಾವೆ ಹೂಡಿರುವ ಈ ಸಮಯದಲ್ಲಿ ಅವರ ಈ ದೃಷ್ಟಾಂತ ಆಗಬಯಸುತ್ತಿದ್ದರೆ? ಅರಬ್ ರಾಷ್ಟ್ರದಲ್ಲಿ ಅದರ ಸುಲಿವೇ ಇಲ್ಲ. ಹೀಗೆ ಅವರ ಬಯಕೆಗೆ ವಿರುದ್ಧವಾಗಿ ಗೋಚರವಾದ ಈ ದೃಷ್ಟಾಂತ ಕಂಡು ಸಹಜವಾಗಿ ಅವರ ಮನಗಳು ನೊಂದಿರಬಹುದು ಮತ್ತು ಅದರಲ್ಲಿ ಅವರ ಅಪಮಾನ ಕಾಣುತ್ತಿರಬಹುದು.

### ಅವರ ಮೇಲೆ ಎರಡನೇ ಅಪಮಾನವೆಂದರೆ ಹಝ್ರತ್ ಮಸೀಹ್ ಮೌಊದ್(ಅ) ರವರ ಪುತ್ರ ಗಂಭೀರ ಸ್ವರೂಪದ ಅನಾರೋಗ್ಯಕ್ಕೆ ತುತ್ತಾಗಿದ್ದು ಮುಬಾಹಲ ನಂತರ ಆರೋಗ್ಯವಂತರಾದರು.

2) ಎರಡನೆಯದಾಗಿ ನಾವು ಮುಬಾಹಲಕ್ಕೆ ಹೊರಟಾಗ ನಮ್ಮ ಹಿರಿಯ ಪುತ್ರ ಗಂಭೀರ ರೀತಿಯಲ್ಲಿ ಅಸ್ವಸ್ಥರಾದರು ಮತ್ತು ಒಂದು ಗಂಭೀರ ರೀತಿಯ ಕಾಯಿಲೆ ಬಂದೊದಗಿತ್ತು. ನಾವದನ್ನು ಕಿಂಚಿತ್ತೂ ಲೆಕ್ಕಿಸಲಿಲ್ಲ. ಅದೇ ಅವಸ್ತೆಯಲ್ಲಿ ಪ್ರಯಾಣ ಬೆಳೆಸಿದೆವು ಆದರೆ ಅಲ್ಲಾಹನು ಮುಬಾಹಲದ ನಂತರ ಅವರಿಗೆ ಆರೋಗ್ಯ ನೀಡಿದನು. ಅವರು (ನಮ್ಮ ಎದುರಾಳಿಗಳು) ಆಣೆ ಮಾಡಿ ಹೇಳಬಹುದೇ. ಈ ಆರೋಗ್ಯವು ಅವರು ಬಯಸಿದಂತೆ ಆಗಿದೆಯೇ.

### ಮೂರನೆಯ ಅಪಮಾನ ಕಾಫಿರ್ ಎನ್ನುವ ಮೌಲ್ವಿಗೆ ಹಝ್ರತ್ ಮಸೀಹ್ ಮೌಊದ್(ಅ) ರವರು ಬರೆದ ಅರಬಿ ಪತ್ರಿಕೆಗೆ ಉತ್ತರ ಬರೆಯಲು ಸಾಧ್ಯವಾಗಲಿಲ್ಲ.

3) ಮೂರನೆಯದಾಗಿ ಈ ಮಾತು ಸಹ ಸ್ಪಷ್ಟವಿದೆ. ಅದೇ ಹದಿನೈದು ತಿಂಗಳುಗಳ ಅವಧಿಯೊಳಗೆ ನಮ್ಮನ್ನು ಕಾಫಿರ್ ಎಂದು ಹೇಳುವ ಮೌಲ್ವಿಗಳಿಗೆ ಅವರ ಪಾಂಡಿತ್ಯ ಸಾದಾರಪಡಿಸಲು ನಾವು ಬರೆದ ಅರಬಿ ಪತ್ರಿಕೆಗೆ ಉತ್ತರ ಬರೆಯಲು ಆಹ್ವಾನಿಸಿದೆವು. ಹಾಗೆ ಅದರಲ್ಲಿಯೂ ಅಲ್ಲಾಹನು ನಮಗೆ ನೆರವು ನೀಡಿ ಅವರನ್ನು ಅಪಮಾನಿತನಾಗಿಸಿದನು. ಪಾದರಿಗಳ ಹಾಗೆ "ನೂರುಲ್ ಹಖ್" "ಕರಾಮತುಸ್ಸಾಹಿಬೀನ್" ಮತ್ತು "ಸಿರ್ರುಲ್ ಖಿಲಾಫ್" ಅವುಗಳ ಉತ್ತರ ಬರೆಯಲು ಅಸಫಲರಾದರು. ಮತ್ತು ಎಂತಹ ಅಪಮಾನಕ್ಕೆ ಗುರಿಯಾದರೆಂದರೆ ಅವರ ಪಾಂಡಿತ್ಯದ ಹೆಸರೇ ಇಲ್ಲದ ಹಾಗಾಯಿತು. ನಾವು ಸ್ಪಷ್ಟವಾಗಿ ಸೂಚಿಸಿದೆವು. ಈ ಪತ್ರಿಕೆಯ ಎದುರಾಗಿ ನೀವು ಉತ್ತರ ಬರೆದು ತೋರಿಸುವುದಾದರೆ ನಿಮಗೆ ಆರು ಸಾವಿರ ಇಪ್ಪತ್ತೇಳು ರೂಪಾಯಿಗಳನ್ನು ಬಹುಮಾನ ನೀಡುವೆವು. ದೇವವಾಣಿಯನ್ನು ಸುಳ್ಳಾಗಿಸಿದೆವು ಎಂದು ಸಾಬೀತುಪಡಿಸಿದರೆ ಅಂದ ಹಾಗೆ ಸಾವಿರ ಶಾಪಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಿರಿ. ಇದೀಗ ಓ ಮೌಲ್ವಿ ಅಬ್ದುಲ್ ಹಖ್ ಮುಸಲ್ಮಾನರಿಗೆ ಕಾಫಿರ್ ಎನ್ನುವವನೇ. ಸತ್ಯ ಹೇಳು. ನಮ್ಮ ಎದುರಿಗೆ ಯಾವ ಪತ್ರಿಕೆಗೆ ಉತ್ತರ ಬರೆದಿರುವೆ, ಬರೆಯಲಿಲ್ಲ ಎಂದಾದರೆ ಸತ್ಯ ಹೇಳು. ಯಾರಿಗೆ ಅಪಮಾನವಾಯಿತು. ನಮಗೂ ಅಥವಾ ನಿಮಗೂ.

### ನಾಲ್ಕನೇ ಅಪಮಾನ ಅಥಮನ ಕುರಿತಾದ ಭವಿಷ್ಯವಾಣಿ ಸತ್ಯವೆಂದಾಯಿತು.

(4) ನಾಲ್ಕನೆಯ ಅತಿದೊಡ್ಡ ಉಪಮಾನ ನಿಮಗೆ ಲಭಿಸಿದ್ದು, ಈ ಭವಿಷ್ಯವಾಣಿ ಹಾಗೂ ಅವಮಾನಿತ ಮಾತುಗಳನ್ನು ಅದು ಅಂತಿಮವಾಗಿ ನಾವು ತನ್ನ ಪೈಕಿ ಬರೆದದ್ದು. ಯಾವನೇ ನ್ಯಾಯವಂತನ ಮುಂದೆ ಪ್ರಸ್ತುತಪಡಿಸಿರಿ. ಅವರು ಆಣೆ ಮಾಡಿ ಹೇಳಿದರೆ ಅದರಿಂದ ನಿಮಗೆ ಗೌರವ ಲಭಿಸಿದೆ. ಯಾವುದೇ ಕಳಂಕ ಹಚ್ಚಲಿಲ್ಲ ಎಂದಾದರೆ ನಾವು ಪ್ರಮಾಣ ಮಾಡಿ ಹೇಳುತ್ತೇನೆ. ನಾನು ಐದು ಸಾವಿರ ಬಹುಮಾನವು ನೀಡುವೆವು. ಅದಾಗ್ಯೂ ನಾವು ಶೇಖ್ ಮುಹಮ್ಮದ್ ಹುಸೇನ್ ಬಟೌಲ್ವಿ ಅವರನ್ನೇ ತೀರ್ಪುಗಾರರನ್ನಾಗಿ ಮಾಡುತ್ತೇವೆ. ಅವರ ಬಳಿ ಕ್ರಮಬದ್ಧ ರೀತಿಯಲ್ಲಿ ಬರಹರೂಪದಲ್ಲಿ ಈ ರೂಪಾಯಿಗಳನ್ನು ಜಮಾ ಮಾಡಬಹುದಾಗಿದೆ. ಕೇವಲ ಅವರಿಗೆ ಮಾಡಬೇಕಾದದ್ದು ಇಷ್ಟೇ. ಅವರು ನಿಂತುಕೊಂಡು ಮೂರು ಸಲ ಹೀಗೆ ಭಾಷಣ ಮಾಡಲಿ. ಅವರುಗಳು ವಿವರಿಸಿದ ಎಲ್ಲಾ ಅಪಮಾನಗಳ ಕಾರಣಗಳು ಸುಳ್ಳಾಗಿವೆ. ಇದು ಸತ್ಯವಲ್ಲ. ಮುಬಾಹಲ ನಂತರ ಅಬ್ದುಲ್ ಹಖ್ ಮತ್ತು ಅವರ ಗುಂಪಿನವರಿಗೆ ಯಾವುದೇ ರೀತಿಯ ಅಪಮಾನ ಉಂಟಾಗಿಲ್ಲ. ಬದಲು ಗೌರವ ದೊರೆತಿದೆ. ನಾನು ಸುಳ್ಳು ಹೇಳುವವನಾದರೆ, ಓ ಸರ್ವಶಕ್ತನಾದ ಅಲ್ಲಾಹನೇ ಅದರ ಶಿಕ್ಷೆ ನಮ್ಮ ಮೇಲೆ, ನನ್ನ ನಯನಗಳ ಮೇಲೆ. ನನ್ನ ದೇಹದ ಮೇಲೆ, ನನ್ನ ಗೌರವದ ಮೇಲೆ ನನ್ನ ಸಂತಾನದ ಮೇಲೆ. ಅತಿ ಶೀಘ್ರವಾಗಿ ವರ್ಷದೊಳಗೆ ಅವತರಿಸು ನಾವು ನಿಮ್ಮ ಈ ಎಲ್ಲಾ ಹೇಳಿಕೆಗಳ ಮೇಲೆ 'ಆಮೀನ್" ಎಂದು ಹೇಳುವೆವು. ಆಗ ಅದೇ ಸಮಯ ಐದು ನೂರು

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ) ಅಲ್ಲಾಹು ಅಕ್ಬರ್ ಎಂದು ಪಿಕ್ಕಾಸಿನಿಂದ ಹೊಡೆದರು. ಆಗಲೂ ಒಂದು ಜ್ವಾಲೆ ಹೊರಡಿತು ಮತ್ತು ಅವರು ಅಲ್ಲಾಹು ಅಕ್ಬರ್ ಎಂದು ಉಚ್ಚರಿಸುತ್ತಾ ಹೀಗೆ ಹೇಳಿದರು: ಈ ಬಾರಿ ಪೇರ್ಶಿಯದ ಕೀಲಿಗೈಗಳು ನನಗೆ ನೀಡಲಾಗಿದೆ ಮತ್ತು ನನಗೆ ಮದಾಇನಿನ ಬಿಳಿ ಅರಮನೆಗಳು ಕಾಣುತ್ತಿವೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝುಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಲ್ಲಾಹನಆಣೆ! ಯಾವ ಸಮುದಾಯಕ್ಕೆ ಇವು(ಸಂಪತ್ತು) ಲಭಿಸುತ್ತದೋ ಅವರಲ್ಲಿ ಅಸೂಯೆ ಮತ್ತು ಹಗೆ ವರ್ಧಿಸುತ್ತದೆ. ಈ ಸಂಪತ್ತು ನಿಮ್ಮ ಬಳಿಗೆ ಬಂದಿದೆ. ಇದರಿಂದ ನಿಮ್ಮ ನಡುವೆ ಸಾಹೋದರ್ಯದ ಬದಲಾಗಿ ಅಸೂಯೆ ಮತ್ತು ಹಗೆ ವರ್ಧಿಸುವುದೋ ಎಂಬ ಚಿಂತೆಯಿಂದ ನಾನು ಅತ್ತುಬಿಟ್ಟೆ. (ಹಝ್ರತ್ ಉಮರ್(ರ))**

**ಮದಾಇನ್, ಮಾಸಬ್‌ಝಾನ್ ಹಾಗೂ ಖೂರ್‌ಝುಸ್ತಾನ್‌ನ ವಿಜಯ, ಅದೇ ರೀತಿ ಜಲೂಲ ಯುದ್ಧ, ರಾಮಹರ್‌ಮಝ್ ಹಾಗೂ ತುಸ್‌ತರ್‌ನಲ್ಲಿ ನಡೆದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ**

**ಐದು(5) ದಿವಂಗತರಾದ ಸನ್ಮಾನ್ಯ ಮುಹಮ್ಮದ್ ಸಈದ್ ಸಾಹಿಬ್‌ರ ಪತ್ನಿ ಸನ್ಮಾನ್ಯ ಪ್ರೊಫೆಸರ್ ಸಯ್ಯದ ನಸೀಂ ಸಈದ್ ಸಾಹಿಬ, ಜರ್ಮನಿಯ ಸನ್ಮಾನ್ಯ ದಾವೂದ್ ಸುಲೈಮಾನ್ ಬಟ್ ಸಾಹಿಬ್, ಸಿಯಾಲ್‌ಕೋಟ್ ಜಿಲ್ಲೆಯ ಗುಲಾಂ ಮುಸ್ತಫಾ ಸಾಹಿಬ್‌ರ ಪತ್ನಿಯಾದ ಝಾಹಿದ ಪರ್‌ವೀನ್ ಸಾಹಿಬ, ಚೌಧರಿ ಅಬ್ದುಲ್ ಹಯ್ಯ್ ಸಾಹಿಬ್‌ರ ಮಗನಾದ ರಾನಾ ಅಬ್ದುಲ್‌ವಹೀದ್ ಸಾಹಿಬ್ ಮತ್ತು ಬಾಂಗ್ಲಾದೇಶದ ಮಾಜಿ ಜಮಾಅತ್ ಅಮೀರ್ ಆಗಿರುವ ಅಲ್‌ಹಾಜ್ ಮೀರ್ ಮುಹಮ್ಮದ್ ಅಲಿ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–07–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಅವರ ಕಾಲದಲ್ಲಿ ನಡೆದ ಯುದ್ಧಗಳ ಬಗ್ಗೆ ಹೇಳುತ್ತಿದ್ದೆ. ಮದಾಇನಿನ ಮೇಲೆ ವಿಜಯದ ಬಗ್ಗೆ ಅಲ್ಲಾಹನು ಹಝ್ರತ್ ಪೈಗಂಬರರಿಗೆ(ಸ) ತಿಳಿಸಿದ ಪ್ರಕಾರ ಅವರು ನುಡಿದ ಭವಿಷ್ಯವಾಣಿಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಸೀರತ್ ಖಾತಮುನ್ನಬಿಯ್ಯೀನಿನಲ್ಲಿ ಹೀಗೆ ಬರೆದಿರುವರು:

ಕಂದಕವನ್ನು ಎಂದರೆ ದೊಡ್ಡ ಹೊಂಡವನ್ನು ಅಗೆಯುವಾಗ ಒಂದು ಬಂಡೆಕಲ್ಲನ್ನು ಒಡೆಯಲು ಆಗುತ್ತಿರಲಿಲ್ಲ. ಅದಲ್ಲದೆ ಮೂರು ದಿನದ ಹಸಿವಿನಿಂದ ಸಹಾಬರು ಸುಸ್ತಾಗಿದ್ದರು. ಕೊನೆಗೆ ಯಾವುದೇ ನಿರ್ವಾಹವಿಲ್ಲದೆ ಅವರು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ, ಒಂದು ಬಂಡೆಕಲ್ಲು ತುಂಡಾಗುತ್ತಿಲ್ಲ ಹೇಳಿದರು. ಆ ವೇಳೆ ಹಝ್ರತ್ ಪೈಗಂಬರ್(ಸ) ಕೂಡ ಹಸಿವೆಯ ಕಾರಣದಿಂದ ಹೊಟ್ಟೆಯಲ್ಲಿ ಕಲ್ಲನ್ನು ಕಟ್ಟಿದ್ದರು. ಹೀಗಿದ್ದರೂ ಹಝ್ರತ್ ಪೈಗಂಬರ್(ಸ) ಬೇಗನೇ ಕಂದಕದ ಸಮೀಪಕ್ಕೆ ಹೋದರು. ಒಂದು ಪಿಕ್ಕಾಸು ಹಿಡಿದುಕೊಂಡು ಅಲ್ಲಾಹನ ನಾಮದಲ್ಲಿ ಆ ಬಂಡೆಕಲ್ಲಿನ ಮೇಲೆ ಹೊಡೆದರು. ಪಿಕ್ಕಾಸು ತಗುಲಿದಾಗ ಕಲ್ಲಿನಿಂದ ಒಂದು ಬೆಂಕಿಯ ಕಿಡಿ ಹಾರಿತು. ಆಗ ಹಝ್ರತ್ ಪೈಗಂಬರ್(ಸ) ಜೋರಾಗಿ ಅಲ್ಲಾಹು ಅಕ್ಬರ್ ಎಂದು ಉಚ್ಚರಿಸುತ್ತಾ ಹೇಳಿದರು: "ನನಗೆ ಸಿರಿಯ ದೇಶದ ಕೀಲಿಗೈಯನ್ನು ನೀಡಲಾಗಿದೆ. ಅಲ್ಲಾಹನಾಣೆ ಈಗ ಸಿರಿಯದ ಕೆಂಪು ಅರಮನೆಗಳು ನನ್ನ ಕಣ್ಣ ಮುಂದೆ ಕಾಣುತ್ತಿದೆ." ಈ ಹೊಡೆತದಿಂದ ಆ ಬಂಡೆಕಲ್ಲು ಅಲ್ಪ ಮಟ್ಟಿಗೆ ತುಂಡಾಯಿತು. ಎರಡನೇ ಬಾರಿ ಹಝ್ರತ್ ಪೈಗಂಬರ್(ಸ) ಅಲ್ಲಾಹನ ಹೆಸರಲ್ಲಿ ಪಿಕ್ಕಾಸಿನಿಂದ ಹೊಡೆದರು. ಆಗಲೂ ಒಂದು ಜ್ವಾಲೆ ಹೊರಡಿತು ಮತ್ತು ಅವರು ಅಲ್ಲಾಹು ಅಕ್ಬರ್ ಎಂದು ಉಚ್ಚರಿಸುತ್ತಾ ಹೀಗೆ ಹೇಳಿದರು: ಈ ಬಾರಿ ಪೇರ್ಶಿಯದ ಕೀಲಿಗೈಗಳು ನನಗೆ ನೀಡಲಾಗಿದೆ ಮತ್ತು ನನಗೆ ಮದಾಇನಿನ ಬಿಳಿ ಅರಮನೆಗಳು ಕಾಣುತ್ತಿವೆ. ಈ ಬಾರಿ ಆ ಬಂಡೆಕಲ್ಲು ಸ್ವಲ್ಪ ಹೆಚ್ಚಿನ ಮಟ್ಟಿಗೆ ತುಂಡಾಯಿತು. ಮೂರನೇ ಬಾರಿ ಹಝ್ರತ್ ಪೈಗಂಬರ್(ಸ) ಪಿಕ್ಕಾಸಿನಂದ ಹೊಡೆದಾಗ ಒಂದು ಕಿಡಿ ಅದರಿಂದ ಹೊರಡಿತು. ಅವರು ಅಲ್ಲಾಹು ಅಕ್ಬರ್ ಎಂದು ಉಚ್ಚರಿಸುತ್ತಾ ಹೇಳಿದರು: ಈಗ ನನಗೆ ಯಮನಿನ ಕೀಲಿಗೈಗಳು ನೀಡಲಾಗಿವೆ. ಅಲ್ಲಾಹನಾಣೆ ಸುನ್‌ಆದ ಬಾಗಿಲುಗಳು ನನಗೆ ಈಗ ತೋರಿಸಲಾಗುತ್ತಿದೆ. ಈ ಬಾರಿ ಬಂಡೆಕಲ್ಲು ಸಂಪೂರ್ಣವಾಗಿ ತುಂಡಾಗಿ ಕೆಳಗೆ ಬಿತ್ತು. ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ) ಪ್ರತಿ ಬಾರಿ ಉಚ್ಚ ಸ್ವರದಲ್ಲಿ ಅಲ್ಲಾಹು ಅಕ್ಬರ್ ಎಂದು ಉಚ್ಚರಿಸಿದರು. ಅದರ ಬಗ್ಗೆ ಸಹಾಬರು ಕೇಳಿದಾಗ ಈ ದಿವ್ಯದರ್ಶನವನ್ನು ಕಂಡದ್ದಾಗಿ ಹಝ್ರತ್ ಪೈಗಂಬರ್(ಸ) ಹೇಳಿದರು. ಮುಸ್ಲಿಮರು ಈ ತಾತ್ಕಾಲಿಕ ತಡೆಯನ್ನು ದೂರ ಮಾಡಿಕೊಂಡು ಸಹಾಬರು ಪುನಃ ಕಲ್ಲುಗಳನ್ನು ಹೊಡೆದು ಕಂದಕವನ್ನು ಅಗೆಯುವ ಕೆಲಸದಲ್ಲಿ ನಿರತರಾದರು.

ಹಝ್ರತ್ ಪೈಗಂಬರ್(ಸ) ನೋಡಿದ ಈ ದೃಶ್ಯ ಒಂದು ದಿವ್ಯದರ್ಶನವಾಗಿತ್ತು. ಈ ಕಷ್ಟತೆಯ ಸಮಯದಲ್ಲಿ ಅಲ್ಲಾಹನು ಮುಸ್ಲಿಮರಿಗೆ ಮುಂದಿನ ವಿಜಯಗಳ ಮತ್ತು ನೆಮ್ಮದಿಗಳ ದೃಶ್ಯವನ್ನು ತೋರಿಸಿಕೊಂಡು ಸಹಾಬರೊಳಗೆ ಪ್ರತೀಕ್ಷೆ ಮತ್ತು ಸಂತೋಷದ ಸ್ಫೂರ್ತಿ ಉಂಟುಮಾಡಿದನು. ಆದರೆ ಪ್ರತ್ಯಕ್ಷದಲ್ಲಿ ಆ ಸಮಯವು ಕಷ್ಟತೆ ಮತ್ತು ತೊಂದರೆ ಕಾಲವಾಗಿತ್ತು. ಮದೀನದ ಕಪಟವಿಶ್ವಾಸಿಗಳು ಈ ವಾಗ್ದಾನಗಳನ್ನು ಕೇಳಿ ಮುಸ್ಲಿಮರನ್ನು ಗೇಲಿ ಮಾಡುತ್ತಾ ಹೀಗೆ ಹೇಳುತ್ತಿದ್ದರು: "ಮನೆಯ ಹೊರಗೆ ಕಾಲಿಡುವ ಶಕ್ತಿಯಿಲ್ಲ. ಆದರೂ ರೋಮ್ ಮತ್ತು ಪೇರ್ಶಿಯದ ದೇಶಗಳ ಕನಸನ್ನು ಕಾಣುತ್ತಿರುವರು." ಆದರೆ ಅಲ್ಲಾಹನು ಅರಿವಿನಲ್ಲಿ ಈ ಎಲ್ಲ ವರದಾನಗಳು ಮುಸ್ಲಿಮರಿಗಾಗಿ ವಿಧಿಸಲಾಗಿದ್ದುವು. ಹೀಗೆ ಈ ವಾಗ್ದಾನಗಳು ತನ್ನದಾದ ಸಮಯಗಳಲ್ಲಿ, ಎಂದರೆ ಕೆಲವು ಹಝ್ರತ್ ಪೈಗಂಬರರ ಕೊನೆಯ ದಿನಗಳಲ್ಲಿ ಮತ್ತು ಹೆಚ್ಚಿನ ವಾಗ್ದಾನಗಳು ಖಲೀಫರ ಕಾಲದಲ್ಲಿ ಪೂರ್ತಿಯಾಗಿ ಮುಸ್ಲಿಮರ ವಿಶ್ವಾಸ ವರ್ಧನೆಗೆ ಮತ್ತು ಸಮಾಧಾನಕ್ಕೆ ಕಾರಣವಾಯಿತು. (ಸೀರತ್ ಖಾತಮನ್ನಬೀಈನ್, ಹಝ್ರತ್ ಮಿರ್ಝ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ–577–578)

ಮದಾಇನಿನ ಮೇಲೆ ವಿಜಯದ ವಾಗ್ದಾನ ಹಝ್ರತ್ ಉಮರರ ಖಿಲಾಫತ್ ಕಾಲದಲ್ಲಿ ಹಝ್ರತ್ ಸಅದರ(ರ) ಕೈಗಳಲ್ಲಿ ಈಡೇರಿತು. ಖಾದಿಸಿಯದ ಮೇಲೆ ಜಯಗಳಿಸಿದ ನಂತರ ಈಗಿನ ಇರಾಕಿನ ಪ್ರಾಚೀನ ಪಟ್ಟಣವಾದ ಬಾಬಿಲೋನಿನ ಮೇಲೆ ವಿಜಯ ಸಾಧಿಸಲಾಯಿತು. ಅನಂತರ ಕೂಸಾ ಎಂಬ ಹೆಸರಿನ ಚಾರಿತ್ರಿಕ ಪಟ್ಟಣಕ್ಕೆ ತಲುಪಿದರು. ಇದು ಬಾಬಿಲೋನಿನ ಆಸುಪಾಸಿನ ಪ್ರದೇಶವಾಗಿದೆ. ಕೂಸಾ ಎಂಬುದು ಹಝ್ರತ್ ಇಬ್ರಾಹೀಮರನ್ನು ನಮ್ರೂದ್ ಬಂಧಿಸಿದ ಸ್ಥಳವಾಗಿತ್ತು. ಸೆರೆಮನೆಯ

ಜಾಗ ಆ ವೇಳೆ ಸುರಕ್ಷಿತವಾಗಿತ್ತು. ಹಝ್ರತ್ ಸಅದ್(ರ) ಅಲ್ಲಿಗೆ ತಲುಪಿ ಸೆರೆಮನೆಯನ್ನು ನೋಡಿದಾಗ ಪವಿತ್ರ ಖುರ್‌ಆನಿನ ಆಯತ್ತನ್ನು ಓದಿದರು. **ತಿಲ್‌ಕಲ್ ಅಯ್ಯಾಮು ನುದಾವಿಲುಹಾ ಬೈನನ್ನಾಸಿ**. ಎಂದರೆ "ಇಂತಹ ವಿಜಯದ ದಿನಗಳನ್ನು ನಾವು ಜನರೆಡೆಯಲ್ಲಿ ಬದಲಾಯಿಸುತ್ತಲಿರುತ್ತೇವೆ." ಅನಂತರ ಕೂಸದಿಂದ ದಾಟುತ್ತಾ ಇಸ್ಲಾಮಿನ ಸೈನ್ಯ ಬಹರ್‌ಸೇರ್ ತಲುಪಿತು. ಅಲ್ಲಿ ಇರಾನಿಯರು ಅರಸನ ಶಿಕಾರಿ ಸಿಂಹವನ್ನು ಸೈನ್ಯದ ಮೇಲೆ ಬಿಟ್ಟರು. ಅದು ಗರ್ಜಿಸುತ್ತಾ ಇಸ್ಲಾಮಿಕ ಸೈನ್ಯಗಳ ಮೇಲೆ ಹಲ್ಲೆ ನಡೆಸಲು ಬಂತು. ಹಝ್ರತ್ ಸಅದ್‌ರ ಸಹೋದರ ಹಾಶಿಂ ಬಿನ್ ಅಬೀ ವಖಾಸ್ ಸಿಂಹದ ಮೇಲೆ ಖಡ್ಗದಿಂದ ಹಲ್ಲೆ ನಡೆಸಿದರು. ಹೀಗೆ ಸಿಂಹ ಅಲ್ಲೇ ಸತ್ತುಹೋಯಿತು. ಅನಂತರ ಮದಾಇನಿನ ಯುದ್ಧವು ನಡೆಯಿತು. ಮದಾಇನ್ ಸಹ ಇರಾಕಿನಲ್ಲಿದೆ. ಅದರ ಲೊಕೇಶನ್ ಹೀಗಿದೆ. ಬಗ್ದಾದಿನಿಂದ ಸ್ವಲ್ಪ ದೂರದಲ್ಲಿ ದಕ್ಷಿಣದ ಕಡೆ ದಜ್‌ಲ ನದಿಯ ದಡದಲ್ಲಿ ಮದಾಇನ್ ಇದೆ. ಇಲ್ಲಿ ಒಂದರ ನಂತರ ಇನ್ನೊಂದರಂತೆ ಪಟ್ಟಣಗಳು ನೆಲೆಸಿದ್ದುವು. ಆದ್ದರಿಂದ ಇದನ್ನು ಮದಾಇನ್ ಎಂದು ಅರೇಬಿಯರು ಕರೆದರು. ಎಂದರೆ ಅನೇಕ ಪಟ್ಟಣಗಳ ಒಕ್ಕೂಟ. ಕಿಸ್ರಾ ರಾಜನ ರಾಜದಾನಿ ಮದಾಇನ್ ಆಗಿತ್ತು. ಅಲ್ಲಿ ಅರಸನ ಬಿಳಿ ಅರಮನೆಗಳಿದ್ದುವು. ಮುಸ್ಲಿಮರ ಮತ್ತು ಮದಾಇನರ ನಡುವೆ ದಜ್‌ಲ ನದಿ ತಡೆಯಾಗಿ ಇತ್ತು. ಇರಾನಿಯರು ನದಿಯ ಎಲ್ಲ ಸೇತುವೆಗಳನ್ನು ಮುರಿದಿದ್ದರು. ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ನದಿಯನ್ನು ದಾಟಲು ಹಝ್ರತ್ ಸಅದ್ ದೋಣಿಗಳನ್ನು ಹುಡುಕಿದರು. ಆದರೆ ಇರಾನಿಯರು ದೋಣಿಗಳನ್ನು ವಶಪಡಿಸಿಕೊಂಡಿರುವರು ಎಂದು ಗೊತ್ತಾಯಿತು. ಮುಸ್ಲಿಮರು ನದಿಯನ್ನು ದಾಟಬೇಕು ಎಂದು ಹಝ್ರತ್ ಸಅದ್(ರ) ಬಯಸಿದ್ದರು. ಆದರೆ ಮುಸ್ಲಿಮರೊಡನೆ ಇದ್ದ ಸಹಾನುಭೂತಿಯ ಕಾರಣದಿಂದ ಅವರು ಹಾಗೆ ಮಾಡಲು ಹೇಳುತ್ತಿರಲಿಲ್ಲ. ಕೆಲವು ಗ್ರಾಮವಾಸಿಗಳು ಸಹ ನದಿಯನ್ನು ದಾಟುವ ಸುಲಭ ಮಾರ್ಗವನ್ನು ಹೇಳಿಕೊಟ್ಟರು. ಆದರೂ ಹಝ್ರತ್ ಸಅದ್ ಹಾಗೆ ಮಾಡಲಿಲ್ಲ ಇಂತದ್ದರಲ್ಲಿ ಮುಸ್ಲಿಮರ ಕುದುರೆಗಳು ನೀರಿಗೆ ಪ್ರವೇಶಿಸುತ್ತಿರುವುದಾಗಿ ಒಂದು ರಾತ್ರಿ ಹಝ್ರತ್ ಸಅದ್(ರ) ಕನಸು ಕಂಡರು. ಈ ಕನಸನ್ನು ಈಡೇರಿಸಲಿಕ್ಕಾಗಿ ಹಝ್ರತ್ ಸಅದ್(ರ) ನದಿಯನ್ನು ದಾಟುವ ದೃಢನಿರ್ಧಾರ ಮಾಡಿಕೊಂಡರು. "ಮುಸ್ಲಿಮರೇ ಬನ್ನಿರಿ, ಈ ನದಿಯನ್ನು ಈಜಿ ದಾಟುವ" ಎಂದು ಹಝ್ರತ್ ಸಅದ್(ರ) ಸೈನ್ಯದೊಡನೆ ಹೇಳುತ್ತಾ ತನ್ನ ಕುದುರೆಯನ್ನು ನದಿಗೆ ಬೀಳಿಸಿದರು. ಅವರನ್ನು ಅನುಸರಿಸುತ್ತಾ ಸೈನ್ಯದ ಇತರ ಸಿಪಾಯಿಗಳು ಸಹ ತಮ್ಮ ಕುದುರೆಗಳನ್ನು ನದಿಗೆ ಹಾಕಿದರು. ಎದುರುಪಕ್ಷದ ಸೈನ್ಯವು ಈ ಆಶ್ಚರ್ಯಕರ ದೃಶ್ಯವನ್ನು ಕಂಡು ಭಯದಿಂದ ಕಿರುಚಿದರು ಮತ್ತು "ದೆವ್ವ ಬಂತು ದೆವ್ವ ಬಂತು" ಎಂದು ಹೇಳುತ್ತಾ ಓಡಲು ಶುರುಮಾಡಿದರು. ಮುಸ್ಲಿಮರು ಮುಂದಕ್ಕೆ ಧಾವಿಸಿ ಪಟ್ಟಣ ಮತ್ತು ಅರಸನ ಅರಮನೆಗಳನ್ನು ವಶಪಡಿಸಿದರು. ಮುಸ್ಲಿಮರ ಆಗಮನಕ್ಕೆ ಮುಂಚಿತವಾಗಿಯೇ ಕಿಸ್ರಾ ರಾಜನು ತನ್ನ ಕುಟುಂಬದ ಜನರನ್ನು ಅಲ್ಲಿಂದ ಸ್ಥಳಾಂತರಗೊಳಿಸಿದ್ದನು. ಆದ್ದರಿಂದ ಮುಸ್ಲಿಮರು ಸುಲಭವಾಗಿ ಪಟ್ಟಣವನ್ನು ವಶಪಡಿಸಿಕೊಂಡರು. ಈ ರೀತಿಯಲ್ಲಿ ಅಹ್‌ಝಾಬ್ ಯುದ್ಧದ ವೇಳೆ ಕಂದಕನ್ನು ಅಗೆಯುವಾಗ ಹಝ್ರತ್ ಪೈಗಂಬರ್(ಸ) ಹೇಳಿದ ಭವಿಷ್ಯವಾಣಿ ಈಡೇರಿತು. ಈ ಅರಮನೆಗಳ ಮೌನದ ವಾತಾವರಣ ಮತ್ತು ನಿರ್ಜನಾವಸ್ಥೆಯನ್ನು ನೋಡಿ ಹಝ್ರತ್ ಸಅದ್(ರ) ಸೂರಃ ದುಖ್ಖಾನಿನ ಈ ವಚನವನ್ನು ಓದಿದರು: **ಕಮ್ ತರಕೂ ಮಿನ್ ಜನ್ನಾತಿನ್ ವ ಉಯೂನಿನ್ ವಝುರೂಇನ್ ವ ಮಖಾಮಿನ್ ಕರೀಂ. ವ ನಿಅ್‌ಮತಿನ್ ಕಾನೂ ಫೀಹಾ ಫಾಕಿಹೀನ್. ಕಝಾಲಿಕ ಔರಸ್‌ನಾ ಖೌಮನ್ ಆಖರೀನ್.** ಎಂದರೆ, ಎಷ್ಟೆಲ್ಲ ಉದ್ಯಾನಗಳನ್ನೂ ಚಿಲುಮೆಗಳನ್ನೂ ಅವರು ತೊರೆದು ಹೋದರು! ಎಷ್ಟೆಲ್ಲ ಕೃಷಿ ಪ್ರದೇಶಗಳನ್ನೂ ರಮ್ಯ ಅರಮನೆಗಳನ್ನೂ! ಯಾವೆಲ್ಲ ಸುಖ ಸೌಕರ್ಯಗಳನ್ನು ಅವರು ಅನುಭವಿಸಿ ಆನಂದಿಸುತ್ತಿದ್ದರು!

ಅರಮನೆಯ ಖಜಾನೆ ಮತ್ತು ಅಮೂಲ್ಯ ವಸ್ತುಗಳನ್ನು ಒಟ್ಟುಗೂಡಿಸಲು ಹಝ್ರತ್ ಸಅದ್(ರ) ಆಜ್ಞಾಪಿಸಿದರು. ಈ ಖಜಾನೆಗಳಲ್ಲಿ ಅರಸನ ಸಾವಿರಾರು ಅವಶೇಷಗಳು ಇದ್ದುವು. ಅವುಗಳಲ್ಲಿ ಯುದ್ಧಕವಚಗಳು, ಖಡ್ಗಗಳು, ಚೂರಿ, ಕಿರೀಟ ಮತ್ತು ರಾಜನ ಬಟ್ಟೆಗಳು ಇದ್ದುವು. ಚಿನ್ನದ ಒಂದು ಕುದುರೆಯಿತ್ತು. ಅದರ ಮೇಲೆ ಬೆಳ್ಳಿಯ ಆಸನವಿತ್ತು. ಅದರ ಎದೆಯಲ್ಲಿ ಮುತ್ತುರತ್ನಗಳನ್ನು ಅಂಟಿಸಲಾಗಿತ್ತು. ಅದೇ ರೀತಿಯಲ್ಲಿ ಬೆಳ್ಳಿಯ ಒಂದು ಒಂಟೆಯಿತ್ತು. ಅದರ ಮೇಲೆ ಚಿನ್ನದ ಆಸನವಿತ್ತು. ಅದರ ಲಗಾಮಿನಲ್ಲಿ ಅಮೂಲ್ಯವಾದ ಮಾಣಿಕ್ಯಗಳನ್ನು ಪೋಣಿಸಲಾಗಿದ್ದುವು. ಯುದ್ಧ ಸಂಪತ್ತಿನಲ್ಲಿ ಒಂದು ನೆಲಹಾಸು ಇತ್ತು. ಅದನ್ನು ಇರಾನಿ ಬಹಾರ್ ಎಂದು ಹೇಳಲಾಗುತ್ತಿತ್ತು. ಅದು ಚಿನ್ನದ್ದಾಗಿತ್ತು. ಅದರ ಮೇಲೆ ಬೆಳ್ಳಿಯ ಒಂದು ಮರವಿತ್ತು ಮತ್ತು ಮುತ್ತುಗಳ ಹಣ್ಣುಗಳಿದ್ದುವು. ಮುಸ್ಲಿಮ್ ಸಿಪಾಯಿಗಳು ಅತ್ಯಂತ ಪ್ರಾಮಾಣಿಕತೆಯಿಂದ ಎಲ್ಲ ಸಾಮಾನುಗಳನ್ನು ಒಟ್ಟುಗೂಡಿಸಿದರು ಮತ್ತು ಅದೇ ರೀತಿಯಲ್ಲಿ ತಂದು ಅಧಿಕಾರಿಯ ಮುಂದೆ ಇರಿಸಿದರು. ಹೀಗೆ ಆ ಸಾಮಾನುಗಳನ್ನು ಅಲಂಕರಿಸಿ ಇಡಲಾದಾಗ ದೂರ ದೂರಕ್ಕೆ ಮೈದಾನ ಬೆಳಗುತ್ತಿತ್ತು. ಇದನ್ನು ನೋಡಿ ಹಝ್ರತ್ ಸಅದ್(ರ) ಅಚ್ಚರಿಗೊಂಡರು ಮತ್ತು ಹೀಗೆ ಹೇಳಿದರು: ಈ ಅಮೂಲ್ಯ ವಸ್ತುಗಳಿಂದ ಏನು ತೆಗೆಯದವರು ನಿಸ್ಸಂಶಯವಾಗಿಯೂ ಪ್ರಾಮಾಣಿಕರು. ಯುದ್ಧ ಸಂಪತ್ತನ್ನು ನಿಯಮಾನುಸಾರ ವಿತರಣೆ ಆಗಿ ಐದನೇ ಭಾಗ ಖಿಲಾಫತಿನ ಸನ್ನಿಧಿಗೆ ಕಳುಹಿಸಲಾಯಿತು. ಹಝ್ರತ್ ಉಮರರ(ರ) ಮುಂದೆ ಈ ಸಾಮಾನುಗಳನ್ನು ಇರಿಸಲಾದಾಗ ಅವರು ಸಹ ಸೈನ್ಯದ ಪ್ರಾಮಾಣಿಕತೆ ಮತ್ತು ಇಂತಹ ವಸ್ತುಗಳೊಡನೆ ಇರುವ ವಿರಕ್ತಿಯನ್ನು ನೋಡಿ ಆಶ್ಚರ್ಯಗೊಂಡರು. ಎಷ್ಟು ಪ್ರಾಮಾಣಿಕ ಸಿಪಾಯಿಗಳು ಎಂದು ಹಝ್ರತ್ ಉಮರ್(ರ) ಸಹ ಅಚ್ಚರಿಯನ್ನು ವ್ಯಕ್ತಪಡಿಸಿದರು. ಉದ್ದ ಮೈಕಟ್ಟಿನ ಸುಂದರನಾದ ಮುಹಲ್ಲಂ ಎಂಬ ಹೆಸರಿನ ವ್ಯಕ್ತಿ ಮದೀನದಲ್ಲಿ ಇದ್ದನು. ರಾಜನ ವಸ್ತ್ರಗಳನ್ನು ಅವನಿಗೆ ತೊಡಿಸಲು ಹಝ್ರತ್ ಉಮರ್(ರ) ಆದೇಶಿಸಿದರು. ಈ ಉಡಿಗೆ ಬೇರೆ ಬೇರೆ ವಿಧಗಳದ್ದಾಗಿತ್ತು. ಹೀಗೆ ಎಲ್ಲ ವಸ್ತ್ರಗಳನ್ನು ಸರದಿ ಪ್ರಕಾರ ಉಡಿಸಲಾಯಿತು. ಈ ವಸ್ತ್ರಗಳ ಅಂದವನ್ನು ನೋಡಿ ಜನರು ಅಚ್ಚರಿಗೊಂಡರು. ಅದೇ ರೀತಿಯಲ್ಲಿ ಬಹಾರ್ ಎಂಬ ಹೆಸರಿನ ರತ್ನಗಂಬಳಿಯನ್ನು ಸಹ ವಿತರಿಸಲಾಯಿತು.

(ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್(ರ), ಅಸ್ಸಾಬಿ, ಪುಟ-413-417, ದಾರುಲ್ ಮಾರಿಫ ಬೈರೂತ್ 2007) (ಅಲ್‌ಫಾರೂಖ್, ಶಿಬ್ಲಿ ನುವಮಾನಿ, ಪುಟ-100-103, ಇದಾರ ಇಸ್ಲಾಮಿಯಾತ್ 2004) (ತಾರೀಖ್ ಅತ್ತಿಬರಿ, ಸಂಪುಟ-2, ಭಾಗ-2, ಪುಟ-388, ನಫೀಸ್ ಅಕಾಡಮಿ ಕರಾಚಿ 2004) (ಮುಜಮುಲ್ ಬಲದಾನ್, ಸಂಪುಟ-4, ಪುಟ-553, ಸಂಪುಟ-5, ಪುಟ-8,89)

ಹಿಜರೀ 16ರಲ್ಲಿ ಜಲೂಲ ಯುದ್ಧ ನಡೆಯಿತು. ಮದಾಇನಿನಲ್ಲಿ ಸೋಲು ಅನುಭವಿಸಿದ ನಂತರ ಇರಾನಿಯರು ಬಗ್ದಾದ್ ಮತ್ತು ಖುರಾಸಾನಿನ ನಡುವೆ ಇರುವ ಜಲೂಲ ಪಟ್ಟಣದಲ್ಲಿ ಒಟ್ಟುಗೂಡಿ ಯುದ್ಧದ ತಯಾರಿಗಳನ್ನು ಶುರುಮಾಡಿದರು. ಹಝ್ರತ್ ಉಮರರ(ರ) ಆದೇಶ ಪ್ರಕಾರ ಹಝ್ರತ್ ಸಅದ್(ರ) ಹಾಶಿಂ ಬಿನ್ ಉತ್‌ಬರಿಗೆ 12 ಸಾವಿರದ ಸೈನ್ಯವನ್ನು ಒಪ್ಪಿಸಿ ಜಲೂಲಕ್ಕೆ ರವಾನೆ ಮಾಡಿದರು. ಜುಲೂಲ ಇರಾಖಿನ ಒಂದು ಪಟ್ಟಣವಾಗಿದೆ ಅದು ಬಗ್‌ದಾದ್‌ಯಿಂದ ಖುರಾಸಾನ್‌ಗೆ ಹೋಗುವ ಮಾರ್ಗದಲ್ಲಿದೆ. ಇಲ್ಲಿ ಮುಸ್ಲಿಮರ ಮತ್ತು ಇರಾನೀಯರ ನಡುವೆ ಭೀಕರ ಯುದ್ಧ ನಡೆದಿತ್ತು. ಮುಸ್ಲಿಮರು ತಿಂಗಳುಗಟ್ಟಲೆ ಪಟ್ಟಣವನ್ನು ಮುತ್ತಿಗೆ ಹಾಕಿದರು. ಈ ವೇಳೆ ಸುಮಾರು 80 ಸಣ್ಣ ಯುದ್ಧಗಳು ನಡೆಯಿತು. ಮುಸ್ಲಿಮರು ಜುಲೂಲ ವಿಜಯದ ಪರಿಸ್ಥಿತಿಯನ್ನು ಹಝ್ರತ್ ಉಮರ್(ರ) ಅವರಿಗೆ ಬರೆದರೆ ಅದರಲ್ಲಿ ಅವರು ಇದನ್ನು ಸಹ ಬರೆದರು ಅಂದರೆ ಹಝ್ರತ್ ಖಅ್‌ಖಅ್(ರ) ಹುಲ್ವಾನ್‌ನಲ್ಲಿ ತಂಗಿದ್ದಾರೆ. ಅದೇ ರೀತಿ ಅವರು ಅಜಮ್ ನಿವಾಸಿಗಳನ್ನು ಹಿಂಬಾಲಿಸುವುದಕ್ಕೆ ಅಪ್ಪಣೆ ಕೇಳಿದರು ಆದರೆ ಹಝ್ರತ್ ಉಮರ್(ರ) ಅದನ್ನು ನಿರಾಕರಿಸುತ್ತ ಹೇಳಿದರು ಹೀಗೆ ಹೇಳಿದರು: ಇರಾಖ್ ಹಾಗೂ ಇರಾನ್‌ನ ಬೆಟ್ಟಗಳ ನಡುವೆ ಒಂದು ಗೋಡೆ ಇರುತ್ತಿದ್ದರೆ ಉತ್ತಮವಾಗಿರುತ್ತಿತ್ತು ಹೀಗೆ ಇರಾನೀಯರು ನಮ್ಮ ಬಳಿ ಬರಲು ಸಾಧ್ಯವಾಗುತ್ತಿರಲಿಲ್ಲ ಮತ್ತು ನಾವು ಅವರ ಪ್ರದೇಶದಲ್ಲಿ ಹೋಗುತ್ತಿರಲಿಲ್ಲ. ನಾನು ಯುದ್ಧ ಸಂಪತ್ತಿನ ಮೇಲೆ ಮುಸ್ಲಿಮರ ಸುರಕ್ಷೆಗೆ ಆದ್ಯತೆ ನೀಡುತ್ತೇನೆ.

ಒಂದು ವರದಿಯ ಪ್ರಕಾರ ಹಝ್ರತ್ ಸಅದ್(ರ) ಖುಝಾಈ ಬಿನ್ ಉಮರ್ ವದೂಲಿ ಅವರೊಂದಿಗೆ ಯುದ್ಧ ಸಂಪತ್ತಿನ ಐದನೇ ಭಾಗದಲ್ಲಿ ಬಂಗಾರ ಹಾಗೂ ಬೆಳ್ಳಿಯ ಪಾತ್ರೆ, ಬಟ್ಟೆ ಹಾಗೂ ಅಬೂ ಮುಫಝ್ಝಿರ ಅಸ್ವದ್‌ನೊಂದಿಗೆ ಖೈದಿಗಳನ್ನು ಕಳುಸಹಿಸಿದರು. ಮತ್ತೊಂದು ವರದಿಯ ಪ್ರಕಾರ ಯುದ್ಧ ಸಂಪತ್ತಿನ ಐದನೇ ಭಾಗವು ಖುಝಾಈ ಹಾಗೂ ಅಬೂಮುಫಝ್ಝಿರ್ ಅವರೊಂದಿಗೆ ಕಳುಹಿಸಿದರು ಮತ್ತು ಅದರ ಲೆಕ್ಕಚಾರವು ಝಿಯಾದ್ ಬಿನ್ ಅಬೂಸುಫಿಯಾನ್ ಅವರೊಂದಿಗೆ ಕಳುಹಿಸಿದರು ಏಕೆಂದರೆ ಅವರು ಲೆಕ್ಕಚಾರ ಅಧಿಕಾರಿಯಾಗಿದ್ದರು ಅವರು ಅದನ್ನು ರೆಜಿಸ್ಟರ್‌ಗಳಲ್ಲಿ ಬರೆಯುತ್ತಿದ್ದರು. ಇವೆಲ್ಲವೂ ಹಝ್ರತ್ ಉಮರ್(ರ)ರವರ ಬಳಿ ತಲುಪಿದಾಗ ಝಿಯಾದ್‌ರವರು ಯುದ್ಧ ಸಂಪತ್ತಿನ ಬಗ್ಗೆ ಹಝ್ರತ್ ಉಮರ್(ರ) ಅವರೊಂದಿಗೆ ಮಾತನಾಡುತ್ತಿರುವಾಗ ಹಝ್ರತ್ ಉಮರ್(ರ) ಹೇಳಿದರು: ನೀವು ಮುಸ್ಲಿಮರ ಮುಂದೆ ಈ ಎಲ್ಲಾ ವಿಷಯಗಳನ್ನು ಹೇಳುವಿರೇಯೇ? ಝಿಯ್ಯಾರ್ ಹೇಳಿದರು ಅಲ್ಲಾಹನ ಆಣೆ! ಇಡೀ ಭೂಲೋಕದಲ್ಲಿ ನನಗೆ ನಿಮ್ಮನ್ನು ಹೊರತು ಪಡಿಸಿ ಯಾರ ಭಯವಿಲ್ಲ ನಾನು ನಿಮ್ಮ ಮುಂದೆ

ಈ ಎಲ್ಲಾ ವಿಷಯಗಳನ್ನು ಹೇಳಿದಾಗ ಬೇರೆಯವರ ಮುಂದೆಯು ಹೇಳುವುದಕ್ಕೆ ಸಿದ್ಧವಾಗದ್ದೇನೆ. ತದನಂತರ ಹಝ್ರತ್ ಝ್ಯಿಯಾದ್(ರ)ರವರು ಜನರ ಮುಂದೆ ನಿಂತು ಎಲ್ಲಾ ವಿಷಯಗಳನ್ನು ಪ್ರಸ್ತುತಪಡಿಸಿದರು, ಮುಸ್ಲಿಮರ ಸಾಧನೆಯ ಬಗ್ಗೆ ವಿವರಿಸಿದರು ಅವರೆಲ್ಲರು ಹೇಗೆ ಯುದ್ಧದಲ್ಲಿ ವೀರತ್ವದಿಂದ ಹೇಗೆ ಹೋರಾಡಿದರು ಎಂಬದನ್ನು ಸಹ ವಿವರಿಸಿದರು. ಹಝ್ರತ್ ಉಮರ್(ರ)ರವರು ಅವರ ಈ ಭಾಷಣವನ್ನು ಆಲಿಸಿ ಹೇಳಿದರು: ಇವರು ಬಹಳ ಉತ್ತಮ ಭಾಷಣಗಾರರಾಗಿದ್ದಾರೆ. ಝಿಯ್ಯಾದ್ ಹೇಳಿದರು: ನಮ್ಮ ಸೈನ್ಯವೂ ತಮ್ಮ ಸಾಧನೆಗಳಿಂದ ನಮ್ಮ ನಾಲಿಗೆಗಳನ್ನು ಬಿಡಿಸಿದೆ.

ಒಂದು ವರದಿಯ ಪ್ರಕಾರ ಯುದ್ಧ ಸಂಪತ್ತಿನ ಐದನೇ ಭಾಗವನ್ನು ಹಝ್ರತ್ ಉಮರರ(ರ) ಸನ್ನಿಧಿಯಲ್ಲಿ ಸಮರ್ಪಿಸಿದಾಗ, ಯುದ್ಧ ಸಂಪತ್ತಿನಲ್ಲಿ ಇದ್ದ ಬೆಲೆಬಾಳುವ ರತ್ನಗಳನ್ನು ನೋಡಿ ಅವರು ಅತ್ತುಬಿಟ್ಟರು. ಹಝ್ರತ್ ಅಬ್ದುರ್ರಹ್ಮಾನ್(ರ) ಹೇಳಿದರು: ಯಾ ಅಮೀರಲ್ ಮೂಮಿನೀನ್, ನೀವೇಕೆ ಅಳುತ್ತಿದ್ದೀರಿ? ಅಲ್ಲಾಹನಾಣೆ ಇದಂತು ಕೃತಜ್ಞತೆ ಅರ್ಪಿಸಬೇಕಾದ ಸಮಯವಲ್ಲವೇ? ಆಗ ಹಝ್ರತ್ ಉಮರ್(ರ) ಹೇಳಿದರು: "ಅಲ್ಲಾಹನಾಣೆ, ನಾನು ಅಳಲು ಕಾರಣ ಅದಲ್ಲ. ಬದಲಾಗಿ ಯಾವ ಸಮುದಾಯಕ್ಕೆ ಇವು ಲಭಿಸುತ್ತದೋ ಅವರಲ್ಲಿ ಅಸೂಯೆ ಮತ್ತು ಹಗೆ ವರ್ಧಿಸುತ್ತದೆ. ಈ ಸಂಪತ್ತು ನಿಮ್ಮ ಬಳಿಗೆ ಬಂದಿದೆ. ಇದರಿಂದ ನಿಮ್ಮ ನಡುವೆ ಸಾಹೋದರ್ಯದ ಬದಲಾಗಿ ಅಸೂಯೆ ಮತ್ತು ಹಗೆ ವರ್ಧಿಸುವುದೋ ಎಂಬ ಚಿಂತೆಯಿಂದ ನಾನು ಅತ್ತುಬಿಟ್ಟೆ.

(ತಾರೀಖ್ ಅತ್ತಿಬರಿ, ಸಂಪುಟ–2, ಪುಟ–468–471, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2012) (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್, ಅಸ್ಲಾಬಿ, ಪುಟ–420–421, ದಾರುಲ್ ಮಾರಿಫ ಬೈರೂತ್ 2007) (ಅಲ್‌ಫಾರೂಖ್, ಶಿಬ್ಲಿ ನುಮಾನಿ. ಪುಟ–104, ಇದಾರ ಇಸ್ಲಾಮಿಯಾತ್ 2004)

ಇದು ಬಹಳ ಚಿಂತನೀಯ ಮತ್ತು ಪಶ್ಚಾತ್ತಾಪ ಮಾಡುಬೇಕಾದಂತಹ ಸಂಗತಿಯಾಗಿದೆ. ಸಂಪತ್ತು ಬಂದ ನಂತರ ಮುಸ್ಲಿಮರಲ್ಲಿ ಅಸೂಯೆ ಮತ್ತು ಹಗೆ ವರ್ಧಿಸುತ್ತಾ ಹೋಯಿತು ಎಂದು ನಾವು ನೋಡುತ್ತಿದ್ದೇವೆ. ಯಾರ ಬಳಿ ಎಣ್ಣೆಯ ಸಂಪತ್ತಿದೆಯೋ ಅವರಲ್ಲೂ ಮತ್ತು ವ್ಯಯಕ್ತಿಕವಾಗಿಯೂ ಯಾರ ಬಳಿಯಾದರೂ ಸಂಪತ್ತು ಬರುವಾಗಲೂ ಇದೇ ಸ್ಥಿತಿಯನ್ನು ಮತ್ತು ದೇವಭಕ್ತಿಯಲ್ಲಿ ಕೊರತೆಯನ್ನು ನಾವು ನೋಡುತ್ತಿದ್ದೇವೆ.

ಮದಾಇನ್ ಯುದ್ಧದ ಸಮಯದಲ್ಲಿ, ಇರಾನ್‌ನ ಅರಸ ಯಝ್‌ದಜರ್ದ್ ತನ್ನ ಸಿಂಹಾಸನ ವನ್ನು ಬಿಟ್ಟು ತನ್ನ ಕುಟುಂಬ ಮತ್ತು ಸೇವಕರೊಂದಿಗೆ ಹುಲ್ವಾನ್‌ಗೆ ತೆರಳಿದನು. ಯಝ್‌ದಜರ್ದ್ ಜಲೂಲಾ ಸೋಲಿನ ಸುದ್ದಿಯನ್ನು ಪಡೆದಾಗ, ಅವನು ಹುಲ್ವಾನ್ ಬಿಟ್ಟು ರಾಯಗೆ ಹೋರಟನು ಮತ್ತು ಓರ್ವ ವಿಶೇಳ ಅಧಿಕಾರಿಯಾದ ಖುಸ್ರಾಶುನೂಮ್ ಅವರನ್ನು ಹುಲ್ವಾನ್ ರಕ್ಷಿಸಲು ಕೆಲವು ನಿಯತಕಾಲಿಕೆಗಳನ್ನು ಕೆಲವು ಸೈನ್ಯದೊಂದಿಗೆ ಬಿಟ್ಟನು. ಹಝ್ರತ್ ಸಅದ್ ಸ್ವತಃ ಜಲುಲಾದಲ್ಲಿಯೇ ಇದ್ದು, ಖಅ್‌ಖಅ್‌ರನ್ನು ಹುಲ್ವಾನ್‌ಗೆ ಕಳುಹಿಸಿದರು. ಖಅ್‌ಖಅ್ ಅಖ್ಸರ್ ಶೀರೀನ್‌ನ ಸಮೀಪ ತಲುಪಿದರು ಅದು ಹುಲ್ವಾನ್ ನಿಂದ ಮೂರು ಮೈಲಿ ದೂರದಲ್ಲಿತ್ತು. ಖುಸ್ರೊ ಶುನೂಮ್ ಸ್ವತಃ ಮುಂದೆ ಬಂದೆ ಯುದ್ಧಕ್ಕಿಳಿದನು ಆದರೆ ಸೋಲು ಅನುಭವಿಸಿ ಅಲ್ಲಿದನು ಹೊರಟು ಹೋದನು. ಖಅ್‌ಖಅ್ ಹಲ್ವಾನ್ ತಲುಪಿ ಅಲ್ಲೇ ಉಳಿದು ಎಲ್ಲೆಡೆ ಶಾಂತಿಯನ್ನು ಬೋಧಿಸಿದರು. ಸುತ್ತಮುತ್ತಲಿನ ಪ್ರದೇಶಗಳ ಮುಖ್ಯಸ್ಥರು ಬಂದು ಜಿಝಿಯಾವನ್ನು ಸ್ವೀಕರಿಸಿದರು ಮತ್ತು ಇಸ್ಲಾಂನ ಬೆಂಬಲಕ್ಕೆ ನಿಲ್ಲುತ್ತಿದ್ದರು. (ಅಲ್‌ಫಾರೂಖ್ ಲೇಖಕ ಶಿಬ್ಲಿ ನುಮಾನಿ, ಪುಟ–106, ಮಕ್ತಬ ಅಲ್‌ಹರ್ಮೈನ್ ಉರ್ದು ಬಝಾರ್ ಲಾಹೋರ್, 1437ಹಿ) (ಅಲ್‌ಅಖ್ಬಾರುಲಅತ್ತವಾಲ್, ಪುಟ–183, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001)

ಮಾಸಬಝಾನ್‌ನ ವಿಜಯ ಹೇಗಾಯಿರು? ಇದರ ಬಗ್ಗೆ ಹಝ್ರತ್ ಹಾಶಿಮ್ ಬಿನ್ ಉತ್ಬ(ರ) ಅವರು ಜಲುಲಾ ಯುದ್ಧದಲ್ಲಿ ಸೇನೆಯ ಕಮಾಂಡರ್ ಆಗಿದ್ದರು ಅವರು ಮದೀನಾಗೆ ಹಿಂದಿರುಗಿದ್ದರು ಮತ್ತು ಹಝ್ರತ್ ಸಅದ್(ರ) ಸಹ ಮದಾಇನ್‌ನಲ್ಲಿಯೇ ತಂಗಿದ್ದರು ಆಗ ಅವರಿಗೆ ಇರಾನಿನ ಒಂದು ಸೈನ್ಯ ಆಝೀನ್ ಬಿನ್ ಹುರ್ಮುಜಾನ್ ನೇತೃತ್ವದಲ್ಲಿ ಮುಸ್ಲಿಮರ ವಿರುದ್ಧ ಹೋರಾಡಲು ಕ್ಷೇತ್ರವನ್ನು ಪ್ರವೇಶಿಸುತ್ತಿದೆ ಎಂದು ವರದಿಯಾಯಿತು. ಹಝ್ರತ್ ಸಅದ್(ರ) ಇದರ ಬಗ್ಗೆ ಹಝ್ರತ್ ಉಮರ್(ರ)ರವರಿಗೆ ತಿಳಿಸಿದರು. ಅದಕ್ಕೆ ಹಝ್ರತ್ ಉಮರ್(ರ) ಝಿರಾರ್ ಇಬ್ನ್ ಖತ್ತಾಬ್ ಅವರ ನೇತೃತ್ವದಲ್ಲಿ ಸೈನ್ಯವನ್ನು ಯುದ್ಧಕ್ಕೆ ಕಳುಹಿಸಬೇಕೆಂದು ನಿರ್ದೇಶಿಸಿದರು, ಅವರ ಮುಂಚೂಣಿಯಲ್ಲಿ ಇಬ್ನ್ ಹುಧೈಲ್ ಮತ್ತು ಅಬ್ದುಲ್ಲಾ ಇಬ್ನ್ ವಹಾಬ್ ರಸ್ಬಿ ಮತ್ತು ಮುಧಾರಿಬ್ ಇಬ್ನ್ ಫುಲನ್ ಅಜ್ಲೀ ರವರು ಮುಖ್ಯಸ್ಥರಾಗಿರುವರು. ಇಸ್ಲಾಮಿಕ್ ಸೈನ್ಯವು ಇರಾನಿನ ಸೈನ್ಯವನ್ನು ಎದುರಿಸಲು ಹೊರಟಿತು ಮತ್ತು ಮಸಬ್ಜಾನ್ ಬಯಲು ಪ್ರದೇಶದಲ್ಲಿ ಶತ್ರುಗಳೊಡನೆ ಭೇಟಿಯಾಯಿತು ಮತ್ತು ಹನದ್ಫ್‌ನಲ್ಲಿ ಯುದ್ಧ ನಡೆಯಿತು, ಇದರಲ್ಲಿ ಇರಾನಿಯನ್ನರನ್ನು ಸೋಲಿಸಿ ಮುಸ್ಲಿಮರು ಮುಂದುವರಿದು ಮಸಬ್ಜಾನ್ ನಗರವನ್ನು ವಶಪಡಿಸಿಕೊಂಡರು. ಜನರು ನಗರದಿಂದ ಪಲಾಯನ ಮಾಡಿದರು, ಆದರೆ ಝಿರಾರ್ ಬಿನ್ ಖತ್ತಾಬ್ ಅವರನ್ನು ಶಾಂತಿಯುತವಾಗಿ ತಮ್ಮ ನಗರಕ್ಕೆ ಬಂದು ನೆಲೆಸುವಂತೆ ಆಹ್ವಾನಿಸಿದರು. ಅವರೆಲ್ಲರು ಆಹ್ವಾನವನ್ನು ಸ್ವೀಕರಿಸಿ ಅವರ ಮನೆಗಳಲ್ಲಿ ನೆಲೆಸಿದರು. (ತಬರಿ, ಸಂಪುಟ–2, ಪುಟ–475, ದಾರ್ ಅಲ್–ಕುತುಬ್ ಇಲ್ಮಿಯಾ ಬೈರುತ್ 1987)

ಬಲಾಝುರಿಯವರು ಮಸಬ್ಜಾನ್‌ನ ವಿಜಯದ ಬಗ್ಗೆ ವಿವಿಧ ವರದಿಗಳನ್ನು ತೆಗೆದುಕೊಂಡಿದ್ದಾರೆ. ಒಂದು ವರದಿ ಏನಂದರೆ ಅಬು ಮೂಸಾ ಅಲ್–ಅಶ್ಅರಿ, ನಹವಾಂದ್ ಯುದ್ಧದಿಂದ ಹಿಂದಿರುಗಿದ ನಂತರ, ಯಾವುದೇ ಹೋರಾಟವಿಲ್ಲದೆ ನಗರವನ್ನು ವಶಪಡಿಸಿಕೊಂಡರು. (ಮುಕ್ರರಮ್ ಸೈಯದ್ ಮೀರ್ ಮಹಮೂದ್ ಅಹ್ಮದ್ ನಾಸಿರ್ ಸಾಹಿಬ್ ಅವರಿಂದ 'ತಾರೀಖೆ ಇಸ್ಲಾಮ್ ಬಿಅಹ್ದಿ ಹಝ್ರತ್ ಉಮರ್(ರ)' ದ ಪ್ರಬಂಧ, ಪುಟ–120) (ಫತೂಹ್ ಅಲ್‌ಬಲದಾನ್, ಅಲ್ಲಾಮ ಬಲಾಝುರಿ, ಪುಟ–185, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2000)

ಖುಝುಸ್ತಾನ್ ವಿಜಯದ ಸ್ಥಿತಿಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಖುಝುಸ್ತಾನ್ ಇರಾನ್‌ನ ಒಂದು ಪ್ರಾಂತ್ಯ. ಹರ್ಮುಜಾನ್ ಇಸ್ಲಾಮ್ ಸ್ವೀಕರಿಸುವುದಕ್ಕು ಮುನ್ನ ಅದೇ ಪ್ರಾಂತ್ಯದ ರಾಜ್ಯಪಾಲರಾಗಿದ್ದರು. ಈ ಪ್ರದೇಶ ಮತ್ತು ಅದರ ನಿವಾಸಿಗಳನ್ನು ಖುಜ್ ಎಂದು ಕರೆಯಲಗುತ್ತಿತ್ತು. ಅಂದರೆ ಇದು ಪರ್ಷಿಯಾ ಮತ್ತು ಬಸ್ರಾ ನಡುವಿನ ಪ್ರದೇಶವನ್ನು ಮತ್ತು ಖುಜಾಸ್ತಾನ್ ನಿವಾಸಿಗಳಾದ ಅಹ್ವಾಝುನ ಸಮೀಪದಲ್ಲಿರುವ ವಾಸಿತ್ ಮತ್ತು ಇಸ್ಫಹಾನ್ ಪರ್ವತಗಳನ್ನು ಸೂಚಿಸುತ್ತದೆ.

ಹಿಜರೀ 14ರಲ್ಲಿ ಹಝ್ರತ್ ಉಮರ್(ರ) ಸೈನ್ಯದ ದೃಷ್ಟಿಕೋನದಿಂದ ಕೆಲವು ಪ್ರಯೋಜನವನ್ನು ಗಮನದಲ್ಲಿಟ್ಟು ಇರಾಕಿನಲ್ಲಿ ಸಣ್ಣ ಪ್ರಮಾಣದಲ್ಲಿ ಸೈನಿಕರಿಗೆ ಪ್ರವೇಶಿಸಲು ಇನ್ನೊಂದು ಮೈದಾನ ದ್ವಾರ ತೆರೆದರು. ದಂಡುನೆಲೆ ಪಟ್ಟಣವಾದ ಬಸ್ರಾದ ಶಂಕುಸ್ಥಾಪನೆ ಮಾಡಿದರು. ಈ ಪ್ರದೇಶದಲ್ಲಿ ಸೈನ್ಯವನ್ನು ಇರಿಸಲು ಮುಖ್ಯವಾದ ಉದ್ದೇಶವು ಇರಾನಿನ ಸೈನ್ಯಕ್ಕೆ ಸಹಾಯಕ ಸೈನ್ಯ ತಲುಪದಿರಲಿಕ್ಕಾಗಿತ್ತು. ಮುಸ್ಲಿಮರು ಖೂಝಿಸ್ತಾನದ ಪ್ರಸಿದ್ಧ ಪಟ್ಟಣವಾದ ಅಹ್‌ವಾಝುನ್ನು ವಶಪಡಿಸಿದಾಗ ಅಲ್ಲಿಯ ಸರದಾರ ಬೇರ್‌ವಾಝ್ ಸಂಧಾನ ಮಾಡಿದನು.

ಈ ಯುದ್ಧದಲ್ಲಿ ಮುಸ್ಲಿಮರು ಅನೇಕ ಜನರನ್ನು ಬಂಧಿಸಿ ಗುಲಾಮರನ್ನಾಗಿ ಮಾಡಿದರು. ಆದರೆ ಹಝ್ರತ್ ಉಮರರ(ರ) ಆದೇಶ ಪ್ರಕಾರ ಎಲ್ಲರನ್ನು ಬಿಡುಗಡೆಗೊಳಿಸಲಾಯಿತು. ಆ ಪ್ರದೇಶದಲ್ಲಿ ಇರಾನಿಯರು ಎರಡು ರಸ್ತೆಗಳಿಂದ ಮುಸ್ಲಿಮ್ ಸೈನ್ಯದ ಮೇಲೆ ಪದೇ ಪದೇ ಆಕ್ರಮಣ ನಡೆಸುತ್ತಿದ್ದರು. ಮುಸ್ಲಿಮರು ಆ ಎರಡೂ ರಸ್ತೆಗಳನ್ನು ವಶಪಡಿಸಿದರು. ಹುರ್ಖೂರ್ ಹೇಳಿದರು: ಹೆಚ್ಚಿನ ಜಾಗದಲ್ಲಿ ನಮಗೆ ಕಾಣಲು ಸಿಗುವುದೇನೆಂದರೆ, ಎಲ್ಲೆಲ್ಲ ಮುಸ್ಲಿಮರಿಗೆ ತೊಂದರೆ ಕೊಡಲಾಗುತ್ತಿತ್ತೋ, ಆಕ್ರಮಣ ನಡೆಸಲಾಗುತ್ತಿತ್ತೋ ಅಲ್ಲೆಲ್ಲ ಮುಸ್ಲಿಮರು ಆಕ್ರಮಣ ನಡೆಸಿದರು ಮತ್ತು ಆ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಅಬೂ ಮೂಸಾ ಅಶ್‌ಅರಿ ತೇರಾ ನದಿಯನ್ನು ಅಹ್‌ವಾಝ್‌ನೊಂದಿಗೆ ಜಯಗಳಿಸಿದರು. ಅಹ್‌ವಾಜ್ ಮೇಲೆ ವಿಜಯ ಸಾಧಿಸಿದ ನಂತರ ಇನ್ನೊಂದು ಸ್ಥಳವಾದ ಮನಾಝಿರ್ ಕಡೆಗೆ ಹೋದರು ಮತ್ತು ಪಟ್ಟಣವನ್ನು ಸುತ್ತುವರೆದರು. ಘೋರವಾದ ಯುದ್ಧ ನಡೆಯಿತು. ಈ ಯುದ್ಧದ ನಡುವೆ ಒಂದು ದಿನ ಒಬ್ಬ ಶೂರ ಮುಸ್ಲಿಮನಾದ ಮುಹಾಜಿರ್ ಬಿನ್ ಝಿಯಾದ್ ಉಪವಾಸವನ್ನು ಇರಿಸಿದರು. ತನ್ನ ಜೀವವನ್ನು ಅಲ್ಲಾಹನ ಸನ್ನಿಧಿಯಲ್ಲಿ ತ್ಯಾಗ ಮಾಡುವ ಉದ್ದೇಶದಿಂದ ಶತ್ರುಗಳನ್ನು ಎದುರಿಸಲು ಹೊರಟರು. ಮುಹಾಜಿರ್ ಉಪವಾಸವನ್ನು ಇರಿಸಿಕೊಂಡು ಯುದ್ಧ ಮೈದಾನಕ್ಕೆ ಹೋಗುತ್ತಿದ್ದಾರೆ ಎಂದು ಅವರ ಸಹೋದರ ಸೈನ್ಯದ ಸೇನಾಧಿಪತಿಯಾದ ಅಬೂ ಮೂಸಾ ಅಶ್‌ಅರಿಗೆ ತಿಳಿಸಿದರು. ಅಬೂ ಮೂಸಾ ಹೇಳಿದರು: ಯಾರಾದರೂ ಉಪವಾಸ ಇರಿಸಿರುವರಾದರೆ, ಅವರು ಉಪವಾಸವನ್ನು ತೊರೆಯಲಿ ಅಥವಾ ಯುದ್ಧ ಭೂಮಿಗೆ ಹೋಗದಿರಲಿ. ಮುಹಾಜಿರ್ ಈ ಘೋಷಣೆಯನ್ನು ಕೇಳಿ ಒಂದು ಗುಟುಕು ನೀರಿನಿಂದ ಉಪವಾಸವನ್ನು ತೊರೆದರು ಮತ್ತು ಹೀಗೆ ಹೇಳಿದರು: ಅಮೀರಿನ ಆದೇಶದ ಕಾರಣ ಹೀಗೆ ಮಾಡುತ್ತೇನೆ. ಸತ್ಯದಲ್ಲಿ ನನಗೆ ಬಾಯಾರಿಕೆಯಿಲ್ಲ. ಹೀಗೆ ಹೇಳುತ್ತಾ

ಆಯುಧವನ್ನು ತೆಗೆದು ಶತ್ರುಗಳೊಡನೆ ಹೋರಾಡಿ ಶಹೀದ್ ಆದರು. ಪಟ್ಟಣದವರು ಅವರ ಶಿರವನ್ನು ಕತ್ತರಿಸಿ ಅರಮನೆಯಲ್ಲಿ ನೇತು ಹಾಕಿದರು. ಸುತ್ತುವರಿಯುವಿಕೆಯು ಬಹಳ ದೀರ್ಘವಾಯಿತು. ಅಬೂ ಮೂಸಾ(ರ)ರವರು ಬಹುಶಃ ಹಝ್‌ರತ್ ಉಮರ್(ರ)ರವರ ಆದೇಶದ ಮೇರೆಗೆ ಸೈನ್ಯದ ಒಂದು ಭಾಗವನ್ನು ಮಾಹಾಜಿರ್‌ರವರ ಸಹೋದರ ರಬೀರವರ ನೇತೃತ್ವದಲ್ಲಿ ಮನಾಝಿರ್‌ನ ಸುತ್ತುವರಿಕೆಗಾಗಿ ಬಿಟ್ಟರು ಮತ್ತು ಸ್ವತಃ ಸೂಸ್ಕಿ ಪಟ್ಟಣದ ಕಡೆ ಹೋದರು. ಇಲ್ಲಿ ರಬೀಯವರು ಹೋರಾಡುತ್ತಾ ಪಟ್ಟಣವನ್ನು ವಶದಲ್ಲಿ ಪಡೆದುಕೊಂಡು ಅನೇಕ ಜನರನ್ನು ಖೈದಿಗಳನ್ನಾಗಿ ಮಾಡಿಕೊಂಡರು ಆದರೆ ಹಝ್‌ರತ್ ಉಮರ್(ರ)ರವರು ಆದೇಶಗಳ ಮೆರೆಗೆ ಇಲ್ಲಿಯು ಎಲ್ಲಾ ಖೈದಿಗಳನ್ನು ಬಿಡುಗಡೆಗೊಳಿಸಲಾಯಿತು. ಹಝ್‌ರತ್ ಅಬೂನೂಸ(ರ) ಸೂಸ್ಕಿಯು ಕಡೆ ಹೋದರು ಅಲ್ಲಿ ಪಟ್ಟಣದವರೊಂದಿಗೆ ಹೋರಾಡಿದರು ಯುದ್ಧದ ನಂತರ ಪಟ್ಟಣದವರು ಬಂಧಿಯಾಗಿ ಕುಳಿತುಕೊಂಡರು. ಕೋನೇಗೆ ಆಹಾರದ ಕೊರತೆಯಾದಾಗ ತಮ್ಮ ಆಯುಧಗಳನ್ನು ಕೆಳಗಿಳಿಸಿದರು.

ಈ ಘಟನೆಗಳನ್ನು ವಿವರಿಸುತ್ತ ಮೀರ್ ಮಹ್ಮೂದ್ ಅಹ್ಮದ್ ಸಾಹಿಬ್ ತಮ್ಮ ಪ್ರಬಂಧದಲ್ಲಿ ಹೇಳುತ್ತಾರೆ ತಬರಿ ಹಾಗೂ ಬಲಾಝುರಿನಲ್ಲಿ ಅನೇಕ ಭಿನ್ನಭಿಪ್ರಾಗಳಿವೆ ಅದರ ಕಾರಣ ಈ ಪ್ರದೇಶದಲ್ಲಿ ಇರಾನಿ ನಾಯಕರು ಪ್ರತಿಜ್ಞೆಗಳನ್ನು ಮುರಿದು ದ್ರೋಹ ಎಸಗಿದ್ದರು ಆದ್ದರಿಂದ ಇಸ್ಲಾಮಿಕ್ ಸೈನ್ಯವೂ ಮತ್ತೊಮ್ಮೆ ಯುದ್ಧದ ಘಟನೆಗಳ ಹಾಗೂ ಮೊದಲನೇಯ ವರದಿಗಳಲ್ಲಿ ವೊದಲ ವಿಜಯುಗಳ ಘಟನೆಗಳು ಮಿಶ್ರಿತವಾಗಿ ಸಂದೇಹಾಸ್ಪದವಾಗಿರಬಹುದು. (ಪ್ರಬಂಧ: ತಾರೀಖೆ ಇಸ್ಲಾಮ್ ಬಿಅಹದಿ ಹಝ್‌ರತ್ ಉಮರ್(ರ), ಮೀರ್ ಮಹ್ಮೂದ್ ಅಹ್ಮದ್ ನಾಸಿರ್ ಸಾಹಿಬ್, ಪುಟ–124–127) (ತಬರಿ, ಸಂಪುಟ–2, ಪುಟ–494, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987) (ಫತೂಹುಲ್ ಬಲದಾನ್, ಪುಟ–225–226)

ಜಲೂಲದಲ್ಲಿ ಮುಸ್ಲಿಮರ ವಿಜಯದ ನಂತರ ಇರಾನಿಯರು ಹರ್‌ಮಝ್ಝಾನನ ನೇತೃತ್ವದಲ್ಲಿ ರಾಮಹರ್‌ಮಿಝ್‌ನಲ್ಲಿ ಒಟ್ಟುಗೂಡಿದರು. ಹಝ್‌ರತ್ ಉಮರರ(ರ) ನಿರ್ದೇಶನ ಪ್ರಕಾರ ಹಝ್‌ರತ್ ಸಅದ್(ರ) ನುಅ್‌ಮಾನ್ ಬಿನ್ ಮಖ್‌ರನನ್ನು ಕೂಫಗೆ ಮತ್ತು ಅಬೂ ಮೂಸಾ ಅಶ್‌ಅರಿಯನ್ನು ಬಸ್ರಾದಿಂದ ಸೈನ್ಯದ ನೇತಾರರನ್ನಾಗಿ ಮಾಡಿ ರವಾನೆ ಮಾಡಿದರು ಹಾಗೂ ಎರಡೂ ಸೈನ್ಯಗಳು ಬಂದುಸೇರುವಾಗ ಅಬೂ ಸಬ್‌ರ ಬಿನ್ ರುಹಮ್ ಅವರ ಕಮಾಂಡರ್ ಆಗಬೇಕು ಎಂದು ನಿರ್ದೇಶನ ಕೊಟ್ಟರು. ನೂಮಾನ್ ಬಿನ್ ಮಖ್‌ರನಿನ ಸೈನ್ಯದೊಂದಿಗೆ ಹರ್‌ಮಝ್ಝಾನನ ಮುಖಾಮುಖಿಯಾಯಿತು. ಅವನು ಸೋತು ತಿಸ್‌ತರಿನ ಕಡೆಗೆ ಪರಾರಿಯಾದನು. ತಿಸ್‌ತರ್ ಸಹ ಖೂಝುಸ್ತಾನ್‌ನಿಂದ ಒಂದು ದಿನದ ದೂರದಲ್ಲಿ ಒಂದು ದೊಡ್ಡ ಪಟ್ಟಣವಾಗಿದೆ ಆ ಪಟ್ಟದಲ್ಲಿ ಆತನು ಬಂಧಿತನಾಗಿದ್ದನು. ಹಝ್‌ರತ್ ಅಬೂಸಬ್ರಹ್(ರ) ರವರ ಸೇತೃತ್ವದಲ್ಲಿ ಇಸ್ಲಾಮಿಕ್ ಸೈನ್ಯವೂ ಪಟ್ಟಣವನ್ನು ಸುತ್ತುವರಿದಿದ್ದರು. ಅದು ಸುಮಾರು ತಿಂಗಳವರೆಗೆ ಮುತ್ತಿಗೆಯಾಗಿತ್ತು. ಇರಾನಿನ ಸೈನ್ಯವೂ ಪದೇ ಪದೇ ಹೊರಬಂದು ಆಕ್ರಮಣ ಮಾಡಿ ಪುನಃ ಒಳಗೆ ಬಂದು ಕುಳಿತುತ್ತಿತ್ತು. ಹೀಗೆ ಈ ಯುದ್ಧದಲ್ಲಿ 80 ಅಕ್ರಮಣಗಳು ನಡೆದಿದ್ದವು. ಕೋನೆಯ ಆಕ್ರಮಣದಲ್ಲಿ ಮುಸ್ಲಿಮರು ಬಹಳ ತೀವ್ರವಾಗಿ ಆಕ್ರಮಣ ನಡೆಸಿದರು. ಮುಸ್ಲಿಮರಿಂದ ತೀವ್ರವಾದ ಅಕ್ರಮಣ ನಡೆದಾಗ ಎರಡು ಪಾರ್ಸಿಯರು ಮುಸ್ಲಿಮರಿಗೆ ಪಟ್ಟಣದ ನೀರು ಹೋರಬರುವ ಜಾಗದಿಂದ ಓಳಗೆ ಹೋಗಿ ಪಟ್ಟಣವನ್ನು ವಿಜಯಿಸಲಾಗಬಹುದು ಎಂದು ತಿಳಿಸಿದರು. ಹೀಗೆ ಮುಸ್ಲಿಮರು ಪಟ್ಟಣದಲ್ಲಿ ಪ್ರವೇಶಿಸಿದರು.

ಇದರ ಬಗ್ಗೆ ಅಖ್ಬಾರ್ ಅತ್ತಿವಾಲ್‌ನ ಲೇಖಕ ಅಬೂ ಹನೀಫ ದೀನೂರಿಯವರು ಬರೆದರು: ಮುಸ್ಲಿಮರ ಮುತ್ತಿಗೆಯು ದೀರ್ಘವಾಯಿತು. ಒಂದು ರಾತ್ರಿ ಪಟ್ಟಣದ ಓರ್ವ ಗೌರವಾನ್ವಿತ ವ್ಯಕ್ತಿ ಹಝ್‌ರತ್ ಅಬೂ ಮೂಸ ಅಶ್‌ಅರಿ(ರ)ರವರ ಬಳಿ ಬಂದು ತನ್ನ ಕುಟುಂಬ ಹಗೂ ತನ್ನ ಸಂಪತ್ತನ್ನು ಉಳಿಸುಕೊಳ್ಳುವುದಕ್ಕೆ ಆಶ್ರಯ ನೀಡಿದರೆ ಪಟ್ಟಣವನ್ನು ವಶಪಡಿಸುವುದರಲ್ಲಿ ಸಹಾಯ ಮಡುವನು ಎಂದು ಹೇಳಿದನು. ಹಝ್‌ರತ್ ಅಬೂಮೂಸ ಅಶ್‌ಅರಿ(ರ) ರವರು ಆಶ್ರಯವನ್ನು ನೀಡಿದರು. ಫತ್ಹುಲ್ ಬಲದಾನ್‌ನಲ್ಲಿ ಹೀಗೆ ಬರೆಯಲಾಗಿದೆ: ಆ ವ್ಯಕ್ತಿಯು ಮುಸ್ಲಿಮನಾದನು. ಆ ವ್ಯಕ್ತಿಯು ಹಝ್‌ರತ್ ಅಬೂ ಮೂಸ ಅಶ್‌ಅರಿ(ರ) ಅವರಿಗೆ ಹೇಳಿದನು ನನ್ನೊಂದಿಗೆ ಯಾರಿಗಾದರು ಕಳುಹಿಸಿಕೊಡಿ ನಾನು ಆತನಿಗೆ ತಿಳಿಸಿಕೊಡುವೆನು. ಅಂದರೆ ಹೇಗೆ ಮುಸ್ಲಿಮರು ಪಟ್ಟವನ್ನು ಪ್ರವೇಶಿಸಬಹುದು ಎಂದು ತಿಳಿಸುವೆನು. ಹಝ್‌ರತ್ ಅಬೂಮೂಸ(ರ)ರವರು ಬನೂ ಶಿಬಾನ್‌ನ ಗೋತ್ರದಿಂದ ಅಶ್ರಸ್ ಬಿನ್ ಔಫ್(ರ)ರವರನ್ನು ಕಳುಹಿಸಿದರು. ಅವರೊಬ್ಬರು ಒಂದು ಸಣ್ಣ ನದಿಯಿಂದ ಹೋಗಿ ಒಂದು ಗುಹೆಯ ದಾರಿಯಿಂದ ಪಟ್ಟದಲ್ಲಿ ಪ್ರವೇಶಿಸಿದರು. ಆತನು ಅಶ್ರಸ್ ಬಿನ್ ಔಫ್‌ರನ್ನು ಒಂದು ಚಾದರವನ್ನು ಅವರ ಮೇಲೆ ಹಾಕಿ ಹೇಳಿದರು ನೀವು ನನ್ನ ಸೇವಕರ ಹಾಗೆ ಹಿಂಬಾಲಿಸಿರಿ. ಆತನು ಅವರನ್ನು ಕರೆದುಕೊಂಡು ಪೂರ್ತಿ ಪಟ್ಟಣವನ್ನು ಸುತ್ತಾಡಿದರು. ನಂತರ ಆತನು ಅವರನ್ನು ಪಟ್ಟಣದ ದ್ವಾರದ ಕಡೆಗೆ ಹೋದರು ಅಲ್ಲಿ ಕಾವಲು ಇತ್ತು. ತದನಂತರ ಆತನು ಹರ್‌ಮುಝಾನ್‌ನ ಬಳಿ ತಲುಪಿದನು ಆತನು ತಮ್ಮ ಅರಮನೆಯ ಒಂದು ದ್ವಾರದಲ್ಲಿ ಸಭೇ ನಡೆಸುತ್ತಿದ್ದನು. ಇದನ್ನೆಲ್ಲ ತೋರಿಸಿದ ನಂತರ ಆತನು ಅವರಿಗೆ ಪುನಃ ಅವರು ಪಟ್ಟಣದಲ್ಲಿ ಪ್ರವೇಶಿಸಿದ ಮಾರ್ಗದಿಂದ ಹೋರ ಕಳುಹಿಸಿದನು. ಅಶ್ರಸ್ ಬಿನ್ ಔಫ್(ರ) ಹಿಂದಿರುಗಿ ಹಝ್‌ರತ ಅಬೂಮೂಸ(ರ)ಅವರನ್ನು ಎಲ್ಲಾ ವಿಷಯಗಳನ್ನು ತಿಳಿಸಿದರು. ನಂತರ ಹೇಳಿದರು ನನ್ನೊಂದಿಗೆ 200 ಧೈರ್ಯಶಲಿ ಸೈನಿಕರನ್ನು ಕಳುಹಿಸಿರಿ ನಾನು ಈ ರಹಸ್ಯ ಮಾರ್ಗವನ್ನು ಅನುಸರಿಸಿ ಪಟ್ಟಣದ ದ್ವಾರದಲ್ಲಿದ್ದ ಸೈನಿಕರನ್ನು ಕೊಂದಿ ಆ ದ್ವಾರನ್ನು ತೆರೆಯುವೆನು ನಂತರ ನೀವು ನಮ್ಮೊಂದಿಗೆ ಬಂದು ಸೇರಿರಿ ಎಂದು. ತದನಂತರ ಹಾಗೆಯೇ ಮಾಡಲಾಯಿತು ಅಶ್ರಸ್‌ರವರು ಕಾವಲುಗಾರರನ್ನು ಕೊಂಡಿ ಬಾಗಿಲನ್ನು ತೆರೆದರು ತಕ್ಷಣವೇ ಇಸ್ಲಾಮಿಕ್ ಸೈನ್ಯವೂ ಅಲ್ಲಾಹು ಅಕ್ಬರ್ ಎಂದು ಘೋಶಿಸುತ್ತಾ ಪಟ್ಟಣದಲ್ಲಿ ಪ್ರವೇಶಿಸಿದರು. ಹರ್‌ಮುಝಾನ್ ಈ ಘೋಷಣೆಗಳನ್ನು ಕೇಳಿಸಿಕೊಂಡು ತನ್ನ ಅರಮನೆಯ ಕಡೆಗೆ ಓಡಿಹೋದನು. ಮುಸ್ಲಿಮರು ಅರಮನೆಯನ್ನು ಸುತ್ತುವರಿದರು. ಹರ್‌ಮುಝಾನ್ ಅರಮನೆಯ ಮೇಲೆ ನಿಂತು ಹೇಳಿದನು ನನ್ನ ಬತ್ತಳಿಕೆಯಲ್ಲಿ ನೂರು ಬಾಣಗಳಿವೆ. ಅದರಲ್ಲಿ ಒಂದು ಬಾಣಗಳು ಉಳಿಯುವರೆಗೂ ನನ್ನನ್ನು ಯಾರು ಮುಟ್ಟಲು ಸಹ ಸಾಧ್ಯವಿಲ್ಲ ತದನಂತರ ನಾನು ಹಿಡಿತಕ್ಕೆ ಒಳಗಾದರೆ ಏನು ಮಾಡಲು ಸಾಧ್ಯವಿಲ್ಲ. ಅದಕ್ಕೆ ಮುಸ್ಲಿಮರು ಹೇಳಿದರು ನೀನು ಏನು ಬಯಸುತ್ತೀಯ? ಅದಕ್ಕೆ ಆತನು ಉತ್ತರಿಸಿದನು ನನ್ನ ಬಗ್ಗೆ ತೀರ್ಮಾವನ್ನು ತೆಗೆದುಕೊಳ್ಳಲು ಹಝ್‌ರತ್ ಉಮರ್(ರ) ಅವರನ್ನು ಬಿಟ್ಟರೆ ನಾನು ನನ್ನ ಆಯುದ್ಧಗಳನ್ನು ಬಿಟ್ಟುಬಿಡುವೆನು. ತದನಂತರ ಹರ್‌ನುಝಾನ್ ತನ್ನ ಆಯುದ್ಧಗಳನ್ನು ತ್ಯಜಿಸಿ ತನ್ನನ್ನು ತನು ಮುಸ್ಲಿಮರಿಗೆ ಸ್ವಧೀನನಾದನು. ಹಝ್‌ರತ್ ಅಬೂಮೂಸಾ ಅಶ್‌ಅರಿಯು ಹರ್‌ಮಝ್ಝಾನನ್ನು ಹಝ್‌ರತ್ ಅನಸ್ ಬಿನ್ ಮಾಲಿಕ್ ಹಾಗೂ ಹಝ್‌ರತ್ ಅಹ್ನಫ್ ಬಿನ್ ಖೈಸ್(ರ)ರವರ ನೇತೃತ್ವದಲ್ಲಿ ಮದೀನದಲ್ಲಿದ್ದ ಹಝ್‌ರತ್ ಉಮರರ ಸನ್ನಿಧಿಯಲ್ಲಿ ಕಳುಹಿಸಿದರು. ಸಂಘವು ಮದೀನದಲ್ಲಿ ಪ್ರವೇಶಿಸಿದಾಗ ಹರ್‌ಮಝ್ಝಾನ್‌ರಿಗೆ ಅವನ ರೇಶ್ಮೆಯ ಬಟ್ಟೆಯನ್ನು ತೊಡಿಸಲಾಯಿತು. ಅದರಲ್ಲಿ ಚಿನ್ನದಿಂದ ಅಲಂಕಾರ ಮಾಡಲಾಗಿತ್ತು. ಅವನ ತಲೆಯಲ್ಲಿ ವಜ್ರವನ್ನು ಅಂಟಿಸಲಾದ ಕಿರೀಟವನ್ನು ಇಡಲಾಯಿತು. ಹಝ್‌ರತ್ ಉಮರ್(ರ) ಮತ್ತು ಮುಸ್ಲಿಮರು ಅವನ ಯಥಾರ್ಥ ಪ್ರತಾಪವನ್ನು ನೋಡಲಿಕ್ಕಾಗಿ ಹೀಗೆ ಮಾಡಲಾಗಿತ್ತು. ಅನಂತರ ಅವರು ಹಝ್‌ರತ್ ಉಮರರ ಕುರಿತು ಕೇಳಿದರು. ಅವರು ಮಸೀದಿಯಲ್ಲಿ ಇರುವವರು ಎಂದು ಜನರು ಹೇಳಿದರು. ಅವರು ಮಸೀದಿಯಲ್ಲಿ ತಲುಪಿದಾಗ ಹಝ್‌ರತ್ ಉಮರ್(ರ) ತನ್ನ ಮುಂಡಾಸಿನ ಮೇಲೆ ತಲೆಯನ್ನಿರಿಸಿ ನಿದ್ದೆ ಮಾಡುತ್ತಿದ್ದರು. ಉಮರ್ ಎಲ್ಲಿದ್ದಾರೆ ಎಂದು ಹರ್‌ಮಝ್ಝಾನ್ ಕೇಳಿದರು. ಅವರು ಮಲಗಿರುವವರು ಎಂದು ಜನರು ಹೇಳಿದರು. ಆ ಸಮಯದಲ್ಲಿ ಮಸೀದಿಯಲ್ಲಿ ಅವರಲ್ಲದೇ ಬೇರೆ ಯಾರೂ ಇರಲಿಲ್ಲ. ಅವರ ಕಾವಲುಗಾರರು ಎಲ್ಲಿದ್ದಾರೆ ಎಂದು ಹರ್‌ಮಝಾನ್ ಕೇಳಿದನು. ಅವರಿಗೆ ಯಾವನೇ ಕಾವಲುಗಾರನ, ಬರಹಗಾರನ ಮತ್ತು ಮಂತ್ರಿಯ ಆವಶ್ಯಕತೆಯಿಲ್ಲ. ಹರ್‌ಮಝ್ಝಾನ್ ತಟ್ಟನೆ ಹೀಗೆ ಹೇಳಿದನು: ಈ ವ್ಯಕ್ತಿ ಖಂಡಿತವಾಗಿಯೂ ನಬಿಯಾಗಿರಬೇಕು. ಜನರು ಹೇಳಿದರು: ಇವರು ನಬಿಯಂತು ಅಲ್ಲ, ಆದರೆ ಖಂಡಿತವಾಗಿಯೂ ಪ್ರವಾದಿಗಳ ಮಾರ್ಗದಲ್ಲಿರುವವರು ಆಗಿರುವರು. ಜನರು ಮಾತುಕತೆಯನ್ನು ಕೇಳಿ ಹಝ್‌ರತ್ ಉಮರ್(ರ) ಎಚ್ಚರಗೊಂಡರು. ಇವನು ಹರ್‌ಮಝ್ಝಾನ್ ಆಗಿರುವನೋ ಎಂದು ಹಝ್‌ರತ್ ಉಮರ್(ರ) ಕೇಳಿದರು. ಹೌದೆಂದು ಜನರು ಹೇಳಿದರು. ಅವನನ್ನು ಮತ್ತು ಅವನ ಬಟ್ಟೆಯನ್ನು ಹಝ್‌ರತ್ ಉಮರ್(ರ) ಗಮನವಿಟ್ಟು ನೋಡಿದರು ಮತ್ತು ಹೀಗೆ ಹೇಳಿದರು: ನಾನು ಬೆಂಕಿಯಿಂದ ಅಲ್ಲಾಹನಲ್ಲಿ ಅಭಯ ಯಾಚಿಸುತ್ತೇನೆ. ಸಂಘದ ಜನರು ಹೇಳಿದರು: ಇವನು ಹರ್‌ಮಝ್ಝಾನ್ ಆಗಿರುವನು. ಇವನೊಡನೆ ಮಾತನಾಡಿರಿ. ಹಝ್‌ರತ್ ಉಮರ್(ರ) ಹೇಳಿದರು: ಎಲ್ಲಿಯ ವರೆಗೆ ಅವನು ತನ್ನ ಹೊಳೆಯುವ ಬಟ್ಟೆಯನ್ನು ಮತ್ತು ಆಭರಣಗಳನ್ನು ಕಳಚುವುದಿಲ್ಲವೋ ಅಲ್ಲಿಯ ವರೆಗೆ ನಾನು ಖಂಡಿತ ಅವನೊಡನೆ ಮಾತನಾಡುವುದಿಲ್ಲ. ಹೀಗೆ ಅವನ ಎಲ್ಲ ಆಭರಣಗಳನ್ನು ಹೊಳೆಯುವ ಬಟ್ಟೆಗಳನ್ನು ಕಳಚಲಾಯಿತು. ಅನಂತರ ಹರ್‌ಮಝಾನ್‌ನೊಡನೆ ಮಾತುಕತೆ

ಶುರುವಾಯಿತು. ಹಝ್ರತ್ ಉಮರ್(ರ) ಹೇಳಿದರು: ಪ್ರತಿಜ್ಞೆಯನ್ನು ಮುರಿದ ಮತ್ತು ಮೋಸ ಮಾಡಿದ್ದರ ಪರಿಣಾಮವೇನಾಯಿತೆಂದು ನೋಡಿದ್ದೀಯಲ್ಲವೇ? ಪ್ರತಿಜ್ಞೆಯನ್ನು ಮುರಿದ ಕಾರಣದಿಂದ ಮತ್ತು ಮೋಸ ಮಾಡಿದ ಕಾರಣದಿಂದ ಯುದ್ಧ ನಡೆದಿತ್ತು. ಅವನು ಹೇಳಿದನು: ಜಾಹಿಲಿಯ್ಯ ಕಾಲದಲ್ಲಿ ದೇವನು ನಮ್ಮಿಬ್ಬರ ಜೊತೆಗೂ ಇರದೇ ಇದ್ದಾಗ ನಾವು ನಿಮ್ಮ ಮೇಲೆ ಜಯ ಗಳಿಸಿದ್ದೆವು. ಈಗ ಅಲ್ಲಾಹನು ನಿಮ್ಮ ಜೊತೆಗೆ ಇದ್ದಾನೆ. ಆದ್ದರಿಂದ ಈಗ ನೀವು ಮೇಲುಗೈ ಸಾಧಿಸಿದ್ದೀರಿ. ಹಝ್ರತ್ ಉಮರ್(ರ) ಹೇಳಿದರು: ಜಾಹಿಲಿಯ್ಯ ಕಾಲದಲ್ಲಿ ನೀವು ನಮ್ಮ ಮೇಲೆ ಜಯಗಳಿಸಲು ಕಾರಣವೇನೆಂದರೆ, ಆಗ ನಿಮ್ಮ ನಡುವೆ ಒಗ್ಗಟ್ಟಿತ್ತು. ನಮ್ಮಲ್ಲಿ ಒಗ್ಗಟ್ಟಿರಲಿಲ್ಲ. ಹೇಗಿದ್ದರೂ ಈಗ ನೀನು ಏನು ಹೇಳುತ್ತೀಯ? ಹರ್‌ಮಝಾನ್ ಹೇಳಿದನು: ನಾನು ಹೇಳುವುದಕ್ಕೆ ಮುಂಚಿತವಾಗಿ ನೀವು ನನ್ನನ್ನು ಕೊಲ್ಲುವಿರೋ ಎಂಬ ಭಯ ನನಗಿದೆ. ಹಝ್ರತ್ ಉಮರ್(ರ) ಹೇಳಿದರು: ಭಯಪಡಬೇಡ. ಆಗ ಹರ್‌ಮಝಾನ್ ನೀರನ್ನು ಬೇಡಿದ. ಅವನಿಗಾಗಿ ಹಳೆಯ ಒಂದು ಲೋಟದಲ್ಲಿ ನೀರನ್ನು ತರಲಾಯಿತು. ಹರ್‌ಮಝಾನ್ ಹೇಳಿದನು: ಬಾಯಾರಿಕೆಯಿಂದ ಸತ್ತರೂ ಸರಿ ನಾನು ಈ ರೀತಿಯಲ್ಲಿ ನೀರನ್ನು ಕುಡಿಯಲಾರೆ. ಹೀಗೆ ಅವನ ಅಂತಸ್ತಿಗೆ ಸರಿಹೊಂದುವ ಪಾತ್ರೆಯಲ್ಲಿ ನೀರನ್ನು ತರಲಾಯಿತು. ಆಗ ಅವನ ಕೈಗಳು ಕಂಪಿಸಲು ಶುರುವಾಯಿತು. ಹರ್‌ಮಝಾನ್ ಹೇಳಿದನು: ನಾನು ನೀರು ಕುಡಿಯುವಾಗ ನನ್ನನ್ನು ಕೊಲ್ಲಲಾಗುವುದೋ ಎಂಬ ಭಯ ನನಗಿದೆ. ಹಝ್ರತ್ ಉಮರ್(ರ): ನೀನು ನೀರು ಕುಡಿಯುವ ವರೆಗೆ ನಿನಗೆ ಯಾರೂ ತೊಂದರೆ ಕೊಡಲಾರರು. ಇದನ್ನು ಕೇಳಿ ಅವನು ನೀರನ್ನು ನೆಲಕ್ಕೆ ಚೆಲ್ಲಿದನು. ಹಝ್ರತ್ ಉಮರ್(ರ) ಹೇಳಿದರು: ಅವನಿಗೆ ಪುನಃ ನೀರು ಕೊಡಿರಿ. ಬಾಯಾರಿಕೆಯಲ್ಲಿರುವಾಗ ಅವನನ್ನು ಕೊಲ್ಲಬಾರದು. ಹರ್‌ಮಝಾನ್ ಹೇಳಿದನು: ನನಗೆ ಬಾಯಾರಿಕೆಯಿಲ್ಲ. ನಾನು ಈ ರೀತಿಯಲ್ಲಿ ಅಭಯವನ್ನು ಪಡೆಯಲು ಬಯಸಿದೆ. ಅನಂತರ ಹರ್‌ಮಝಾನ್ ಇಸ್ಲಾಮನ್ನು ಸ್ವೀಕರಿಸಿದನು ಮತ್ತು ಮದೀನದಲ್ಲೇ ನೆಲೆಸಿದನು. ಹಝ್ರತ್ ಉಮರ್(ರ) ಅವರಿಗೆ 2 ಸಾವಿರದ ಪಿಂಚಣಿಯನ್ನು ನಿಶ್ಚಯಿಸಿದರು. (ಸೀರತ್ ಅಮೀರುಲ್ ಮುಮಿನೀನ್ ಉಮರ್ ಬಿನ್ ಖತ್ತಾಬ್(ರ) ಅಸ್ಸಲಾಬಿ, ಪುಟ-422-425, ದಾರುಲ್ ಮಾರಿಫ಼ ಬೈರೂತ್ 2007) (ಅಲ್‌ಅಕ್ಬಾರುಅತ್ತವಾಲ್, ಅಬೂ ಹನೀಫ಼ ಸೀನೂರಿ, ಪುಟ-188-190, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2001) (ಫ಼ತುಹುಲ್ ಬಲದಾನ್, ಪುಟ-536, ಮುಸದ್ದದುಲ್ ಮಾರಿಫ಼ ಬೈರೂತ್ 1987) (ಮುಜಮುಲ್ ಬಲದಾನ್, ಸಂಪುಟ-3, ಪುಟ-19, ಸಂಪುಟ-2, ಪುಟ-34, ದಾರ್ ಸಾದಿರ್ ಬೈರೂತ್ 1977)

ಅಖಾಇದುಲ್ ಫ಼ರೀದಿನಲ್ಲಿ ಹೀಗೆ ಬರೆಯಲಾಗಿದೆ: ಹರಮ್‌ಝಾನ್‌ನನ್ನು ಹಝ್ರತ್ ಉಮರ್(ರ) ರವರ ಬಳಿ ಖೈದಿಯನ್ನಾಗಿಸಿ ಕರೆತಂದಾಗ ಹಝ್ರತ್ ಉಮರ್(ರ) ಆತನ್ನನು ಇಸ್ಲಾಮ್ ಸ್ವೀಕರಿಸಲು ಅಹ್ವಾನಿಸಿದರು ಆದರೆ ಆತನು ಅದಕ್ಕೆ ಒಪ್ಪಲಿಲ್ಲ. ಅದಕ್ಕೆ ಹಝ್ರತ ಉಮರ್(ರ) ಆತನ್ನನು ವಧಿಸಲು ಆದೇಶಿಸಿದರು. ಆತನನ್ನು ವಧಿಸಲು ಕರೆದುಕೊಂಡು ಹೋದಾಗ ಆತನು ಹೇಳಿದನು: ಯಾ ಅಮೀರಲ್ ಮುಮಿನೀನ್!! ನೀವು ನನ್ನನ್ನು ನೀರುಣಿಸಿರಿ. ಹಝ್ರತ್ ಉಮರ್(ರ)ರವರು ನೀರುಣಿಸಲು ಆದೇಶಿಸಿದರು. ಹರ್‌ಮಝಾನ್ ಹೇಳಿದನು: ನಾನು ನೀರು ಕುಡಿಯುವಾಗ ನನ್ನನ್ನು ಕೊಲ್ಲಲಾಗುವುದೋ ಎಂಬ ಭಯ ನನಗಿದೆ. ಹಝ್ರತ್ ಉಮರ್(ರ): ನೀನು ನೀರು ಕುಡಿಯುವ ವರೆಗೆ ನಿನಗೆ ಯಾರೂ ತೊಂದರೆ ಕೊಡಲಾರರು. ಇದನ್ನು ಕೇಳಿ ಅವನು ನೀರನ್ನು ನೆಲಕ್ಕೆ ಚೆಲ್ಲಿ ಹೇಳಿದನು ತಮ್ಮ ಮಾತನ್ನು ಪೂರ್ಣಗೊಳಿಸಿರಿ. ಹಝ್ರತ್ ಉಮರ್(ರ) ಹೇಳಿದರು ನಾನು ನಿನಗೆ ಸ್ವಲ್ಪ ಸಮಯ ನೀಡುವೆನು ಮತ್ತು ನಾನು ನೋಡುವೆನು ನೀನು ಯಾವ ರೀತಿ ನಡೆದುಕೊಳ್ಳುತ್ತೀಯ ಎಂದು. ಅವನ ಬಳಿಯಿಂದ ಖಡ್ಗವನ್ನು ದೂರಗೊಳಿಸಿದಾಗ ಹರ್‌ಮುಝಾನ್ ಹೇಳಿದನು **ಅಶ್‌ಹದು ಅಂಲ್ಲಾಇಲಾಹ ಇಲ್ಲಲ್ಲಾಹು ವಹದಹೂ ಲಾಶರೀಕಲಹೂ, ವ ಅನ್ನ ಮುಹಮ್ಮದನ್ ಅಬ್ದುಹೂ ವರಸೂಲಹು.** ಅಲ್ಲಾಹನ ಹೊರತು ಬೇರೆ ಯಾರು ಆರಾಧನೆಗೆ ಅರ್ಹರಲ್ಲ, ಆತನಿಗೆ ಪಾಲುದಾರರಿಲ್ಲ ಮತ್ತು ಮುಹಮ್ಮದ್(ಸ) ಅವರ ಸೇವಕರು ಮತ್ತು ಅವರ ಸಂದೇಶವಾಹಕರು ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ. ಹಝ್ರತ್ ಉಮರ್ ಅವರು ಹರ್‌ಮುಝಾನ್ ಅವರನ್ನು ನೀನು ಮೊದಲು ಏಕೆ ನಂಬಲಿಲ್ಲ ಎಂದು ಕೇಳಿದರು. ಈ ಬಗ್ಗೆ ಹರ್‌ನುಝಾನ್ ಹೇಳಿದರು: ಯಾ ಅಮೀರುಲ್ ಮುಮಿನೀನ್! ಖಡ್ಗದ ಭಯದಿಂದ ನಾನು ಮುಸ್ಲಿಂ ಆಗಿದ್ದೇನೆ ಎಂದು ಜನರು ಹೇಳುತ್ತಾರೆ ಎಂದು ನಾನು ಹೆದರುತ್ತಿದ್ದೆ, ಏಕೆಂದರೆ ಖಡ್ಗವನ್ನು ನನ್ನ ತಲೆಯ ಮೇಲೆ ಇರಿಸಲಾಗಿತ್ತು. ಅದರ ನಂತರ, ಹಝ್ರತ್ ಉಮರ್(ರ) ಇರಾನಿನ ಮೇಲೆ ಸೈನಿಕ ಆಕ್ರಮಣ ನಡೆಸುವಾಗ ಹರ್‌ಮಝಾನಿಂದ ಸಮಾಲೋಚನೆ ನಡೆಸುತ್ತಿದ್ದರು ಮತ್ತು ಅವನ ಸಲಹೆ ಪ್ರಕಾರ ನಡೆಯುತ್ತಿದ್ದರು. (ಅಲ್ ಅಖದುಲ್ ಫ಼ರೀದ್, ಸಂಪುಟ-2, ಪುಟ-144, ದಾರ್ ಅರ್‌ಖಮ್ ಬೈರೂತ್ 1999)

ಹಝ್ರತ್ ಉಮರರ ಶಹಾದತಿನಲ್ಲಿ ಹರ್‌ಮಝಾನನ ಕೈವಾಡವಿತ್ತು ಎಂದು ಸಂಶಯಿಸಲಾಗುತ್ತದೆ. ಆದರೆ ಈ ಸಂಶಯವನ್ನು ಹಝ್ರತ್ ಮುಸ್ಲಿಹ್(ರ) ಸರಿಯೆಂದು ಭಾವಿಸುತ್ತಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರರ ಕೊಲೆಗಾರನಾದ ಫ಼ೀರೋಝ್ ಕೊಲೆ ಮಾಡುವುದಕ್ಕೆ ಮುಂಚಿತವಾಗಿ ಹರ್‌ಮಝಾನನ್ನು ಭೇಟಿಯಾದರು. ಫ಼ೀರೋಝಿನ ಕೈಯಲ್ಲಿ ಚೂರಿಯನ್ನು ಕಂಡು ಹರ್‌ಮಝಾನ್ ಅದರ ಕಾರಣವನ್ನು ಕೇಳಿದನು ಮತ್ತು ಆ ಚೂರಿಯನ್ನು ತನ್ನ ಕೈಯಲ್ಲಿ ಹಿಡಿದು ನೋಡಿದನು. ಅವರಿಬ್ಬರೂ ಮಾತನಾಡುತ್ತಿದ್ದಾಗ ಯಾರೋ ಅವರನ್ನು ನೋಡಿದರು. ಹಝ್ರತ್ ಉಮರ್(ರ) ಶಹೀದ್ ಆದಾಗ ಅವನು ಹೀಗೆ ಹೇಳಿಕೆ ಕೊಟ್ಟನು: ಫ಼ೀರೋಝಿಗೆ ಹರ್‌ಮಝಾನ್ ಚೂರಿಯನ್ನು ಕೊಡುವುದಾಗಿ ನಾನು ಸ್ವತಃ ನೋಡಿದ್ದೇನೆ. ಆಗ ಹಝ್ರತ್ ಉಮರರ(ರ) ಕಿರಿಯ ಮಗನಾದ ಉಬೈದುಲ್ಲಾಹ್ ಯಾವುದೇ ತನಿಖೆ ನಡೆಸದೇ ಸ್ವತಃ ಹರ್‌ಮಝಾನನ್ನು ಕೊಲೆ ಮಾಡಿದನು. ಹಝ್ರತ್ ಉಸ್ಮಾನ್(ರ) ಖಲೀಫರಾದಾಗ ಅವರು ಹರ್‌ಮಝಾನಿನ ಮಗನನ್ನು ಕರೆದರು ಮತ್ತು ಉಬೈದುಲ್ಲಾಹ್‌ರನ್ನು ಮಗನಿಗೆ ಒಪ್ಪಿಸಿಕೊಂಡು ಹೇಳಿದರು: ಹೇ ನನ್ನ ಪುತ್ರಾ, ಇವನು ನಿನ್ನ ತಂದೆಯ ಕೊಲೆಗಾರನಾಗಿರುವನು. ಆದ್ದರಿಂದ ನೀನು ಹೋಗು ಮತ್ತು ಅವನನ್ನು ಕೊಂದುಹಾಕು. ಹೇಗಿದ್ದರೂ ಹರ್‌ಮಝಾನನ ಮಗನು ಜನರ ಶಿಫಾರಿಸಿನ ಮೇಲೆ ಉಬೈದುಲ್ಲಾಹ್‌ರನ್ನು ಕೊಲ್ಲಲಿಲ್ಲ. ಕೊಲೆಗಾರನನ್ನು ಬಂಧಿಸುವುದು ಮತ್ತು ಅವನಿಗೆ ಶಿಕ್ಷೆ ನೀಡುವುದು ಸರ್ಕಾರದ ಕೆಲಸವಾಗಿದೆ ಎಂದು ಇದರಿಂದ ಸಾಬೀತಾಗುತ್ತದೆ.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅನಂತರ ಅವರ ಜನಾಝ಼ ಗಾಇಬ್ ನಮಾಝ್ ಸಹ ನಿರ್ವಹಿಸುವೆನು.

ಅವರಲ್ಲಿ ಮೊದಲ ಪ್ರಸ್ತಾಪ ಮುಹಮ್ಮದ್ ಸಈದ್ ಸಾಹಿಬ್‌ರ ಪತ್ನಿ ಸನ್ಮಾನ್ಯ ಪ್ರೊಫ಼ೆಸರ್ ಸಯ್ಯದ ನಸೀಂ ಸಈದ್ ಸಾಹಿಬರದ್ದಾಗಿದೆ. ಅವರು ಹಝ್ರತ್ ಅಲ್‌ಹಾಜ್ ಹಾಫ಼ಿಝ್ ಡಾಕ್ಟರ್ ಸಯ್ಯದ್ ಶಫ಼ೀಅ್ ಮುಹಖ್ಖಿಖ್ ದೆಹಲವಿ ಸಾಹಿಬ್‌ರ ಮಗಳಾಗಿದ್ದರು. ಕೆಲವು ದಿನಗಳಿಗೆ ಮುಂಚೆ 88ನೇ ವಯಸ್ಸಿನಲ್ಲಿ ಪಾಕಿಸ್ತಾನದಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆ ಅನೇಕ ಪುಸ್ತಕಗಳ ಲೇಖಕರಾಗಿದ್ದರು. ಉತ್ತಮ ಡಿಬೇಟರ್ ಮತ್ತು ಉನ್ನತ ಮಟ್ಟದ ಸಹಾಫ಼ಿ ಆಗಿದ್ದರು. ದೆಹಲಿಯಿಂದ 16 ಪತ್ರಿಕೆಗಳನ್ನು ಅವರು ಪ್ರಕಟಿಸಿದ್ದರು. ಹಝ್ರತ್ ಸಯ್ಯದ್ ಶಫ಼ೀ ಅಹ್ಮದ್ ಸಾಹಿಬ್ 12ನೇ ವಯಸ್ಸಿನಲ್ಲಿ ಹಝ್ರತ್ ಮಸೀಹ್ ಮೌಊದ್‌ರ ಬೈಅತ್ ಮಾಡಿದ್ದರು. ಭಾರತದ ಪ್ರಸಿದ್ಧ ಸೂಫ಼ಿ ಕವಿ ಮತ್ತು ಮಹಾನುಭಾವರಾದ ಖಾಜ ಮೀರ್ ದರ್ದ್‌ರ ಸಂತಾನ ಪರಂಪರೆಗೆ ಸೇರಿದ್ದರವರಾಗಿದ್ದರು. ಈ ರೀತಿಯಲ್ಲಿ ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್‌ರ ಸಂಬಂಧಿಕರೂ ಆಗಿದ್ದರು. ಹಝ್ರತ್ ಸಯ್ಯದ್ ಶಫ಼ೀ ಅಹ್ಮದ್ ಸಾಹಿಬ್ ಹಝ್ರತ್ ಅಮ್ಮಾ ಜಾನರ ಸೋದರಳಿಯರಾಗಿದ್ದರು. 1957ರಲ್ಲಿ ಸನ್ಮಾನ್ಯ ಮುಹಮ್ಮದ್ ಸಈದ್ ಅಹ್ಮದ್ ಸಬ್ ಇಂಜಿನಿಯರ್‌ರೊಂದಿಗೆ ಸಯ್ಯಿದ ನಸೀಮರ ವಿವಾಹವಾಯಿತು. ಅವರ ಮಗಳಾದ ಖಾಲಿದ ಸಾಹಿಬ ಹೇಳುತ್ತಾಳೆ: ನನ್ನ ಅಜ್ಜಿ ನನ್ನ ತಂದೆತಾಯಂದಿರ ವಿವಾಹ ಸಂಬಂಧ ನಡೆಸುವಾಗ ದೇವಭಕ್ತಿಗೆ ಪ್ರಾಮುಖ್ಯತೆ ನೀಡಿದ್ದರು. 20, 21 ವಯಸ್ಸಿನ ಒಬ್ಬ ಖಾಇದ್‌ರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅದೊಂದು ಅರ್ಧ ಜೀವವಿದ್ದ ಒಂದು ಜಮಾಅತಾಗಿತ್ತು. ಅದಕ್ಕೆ ಜೀವದ ಆತ್ಮವನ್ನು ಊದಲಾಯಿತು. ಈ ಸೇವೆಯ ಗರಿಮೆ ಆ ಜಮಾಅತಿನ ಖಾಇದಾದ ಮುಹಮ್ಮದ್ ಸಈದ್ ಅಹ್ಮದ್ ಮತ್ತು ಅವರ ನಾಲ್ಕೈದು ಸಹಾಯಕರಿಗೆ ಸಲ್ಲುತ್ತದೆ. ಕಳೆದ ಬಾರಿಯ ಪ್ರವಾಹದ ಸಂದರ್ಭದಲ್ಲಿ ಅವರು ಅಸಾಧಾರಣವಾದ ರೀತಿಯಲ್ಲಿ ಸೇವೆ ಸಲ್ಲಿಸಿದರು. ಹೀಗೆ ಅವರು ಶ್ಲಾಘನಗೆ ಅರ್ಹರು. ಹೀಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ನಸೀಂ ಸಈದ್ ಸಾಹಿಬರ ಪತಿಯನ್ನು ಹೊಗಳಿದ್ದರು. ಇದೇ ಸಂಗತಿಯನ್ನು ಮುಂದಿರಿಸುತ್ತಾ ನಸೀಂ ಸಈದ್ ಸಾಹಿಬರ ತಾಯಿ ವಿವಾಹ ಸಂಬಂಧವನ್ನು ನಡೆಸಿದರು. ನಸೀಂ ಸಾಹಿಬರಿಗೆ ನಾಲ್ವರು ಪುತ್ರರು ಮತ್ತು ಪುತ್ರಿಯರು ಇರುವರು. ಅವರ ಧಾರ್ಮಿಕ ಸೇವೆಯೂ 1954ರಲ್ಲಿ ಶುರುವಾಗಿತ್ತು. ಅವರು ಹಝ್ರತ್ ಸಯ್ಯದ ಛೋಟಿ ಆಪಾರೊಂದಿಗೆ ಕೆಲಸ ಶುರುಮಾಡಿದ್ದರು.

2015ರ ತನಕ ಸುಮಾರು 61 ವರ್ಷಗಳು ಅದು ಜಾರಿಯಲ್ಲಿತ್ತು. ಸಈದ್ ಸಾಹಿಬ್ ಸೈನ್ಯದಲ್ಲಿ ಇದ್ದರು ಮತ್ತು ಅವರ ಟ್ರಾನ್ಸ್‌ಫರ್ ಆಗುತ್ತಿತ್ತು. ಆದ್ದರಿಂದ ಬೇರೆ ಬೇರೆ ಪಟ್ಟಣಗಳಿಗೆ ಅವರೊಂದಿಗೆ ಹೋಗುತ್ತಿದ್ದರು. ಅಲ್ಲಿ ಅನೇಕ ಪಟ್ಟಣಗಳಲ್ಲಿ ಸೇವೆ ಸಲ್ಲಿಸಲು ಸಂದರ್ಭ ಸಿಕ್ಕಿತ್ತು. ಸ್ವತಃ ಸಹ ವಿದ್ಯಾವಂತ ಮತ್ತು ಜ್ಞಾನಿಯಾದ ಮಹಿಳೆಯಾಗಿದ್ದರು. ಇಪ್ಪತ್ತಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದಿರುವರು. ಅವುಗಳಲ್ಲಿ ಪ್ರವಾದಿಗಳ ಬಗ್ಗೆ ಕಥೆಗಳನ್ನು ಒಳಗೊಂಡ ಪುಸ್ತಕಗಳು ಸಹ ಇವೆ. ಮಹಾನುಭಾವರ ಕುರಿತು ಅನೇಕ ಪುಸ್ತಕಗಳನ್ನು ಬರೆದಿರುವರು. ಅವರ ಮಗಳಾದ ಹಾಮಿದ ಗಫೂರ್ ಮನ್ನಾನ್ ಸಾಹಿಬ ಬರೆಯುತ್ತಾಳೆ: ನನ್ನ ತಾಯಿ ಆರಾಧನೆ ಮಾಡುವ, ಪಂಡಿತೆ, ಸತ್ಕರ್ಮಿ, ನಿಷ್ಠಾವಂತ, ತ್ಯಾಗಶೀಲ, ಪ್ರೀತಿ, ಕರುಣೆ ಮತ್ತು ವಿನಯದ ಮೂರ್ತೀಭಾವವಾಗಿದ್ದರು. ಯಾವಾಗಲೂ ವಿನಮ್ರವಾಗಿ ದುಆ ಮಾಡುವುದನ್ನು ಕಂಡಿದ್ದೇನೆ. ತಹಜ್ಜುದ್ ಮತ್ತು ನಮಾಝನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯಿಂದ ಹಿಡಿದು ಇಲ್ಲಿಯ ವರೆಗೆ ನಾಲ್ವರು ಖಲೀಫರೊಂದಿಗೆ ಅವರು ವೈಯಕ್ತಿಕ ಸಂಬಂಧವನ್ನು ಇರಿಸಿದ್ದರು. ಜಮಾಅತಿನ ಸೇವೆ ಮಾಡುವ ಸೌಭಾಗ್ಯ ಸಿಗುತ್ತಿತ್ತು. ನನ್ನನ್ನು ಭೇಟಿಯಾಗಿರಲಿಲ್ಲ. ಆದರೆ ಪತ್ರ ವ್ಯವಹಾರದ ಮೂಲಕ ಯಾವಾಗಲೂ ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದರು. ಅವರ ಮಕ್ಕಳು ಸಹ ಇದ್ದನ್ನೇ ಬರೆದಿರುವರು. ಅವರ ಪತ್ರಗಳಲ್ಲಿ ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಅಸಾಧಾರಣವಾದ ಪ್ರಕಟಣೆ ಕಾಣಬಹುದಾಗಿತ್ತು. ಅಲ್ಲಾಹನು ಅವರ ಮಕ್ಕಳಿಗೂ ಈ ಸಂಬಂಧವನ್ನು ನೆಲನಿಲ್ಲಿಸಲು ಸೌಭಾಗ್ಯ ನೀಡಲಿ.

ಅವರ ಹಿರಿಯ ಮಗನಾದ ಖಾಲಿದ್ ಸಈದ್ ಸಾಹಿಬ್ ಹೇಳುತ್ತಾರೆ: ಅಲ್ಲಾಹನೊಂದಿಗೆ ಸಂಬಂಧವು ಅಲ್ಲಾಹನು ನಿಮ್ಮ ಮುಂದೆ ಸ್ನೇಹಿತನ ಹಾಗೆ ಇರುವಂತೆ ಇರಬೇಕು ಎಂದು ತಾಯಿ ಹೇಳುತ್ತಿದ್ದರು. ಹಝ್ರತ್ ಪೈಗಂಬರರೊಂದಿಗೆ ಯಥಾರ್ಥ ಪ್ರೇಮವಿರಿಸಬೇಕು ಎಂದು ಹೇಳುತ್ತಿದ್ದರು. ಸ್ವತಃ ಪ್ರೇಮವಿರಿಸಿದ್ದರು. ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಮತ್ತು ಜಮಾಅತಿನೊಂದಿಗೆ ಆಳವಾದ ಆಧ್ಯಾತ್ಮಿಕ ಸಂಬಂಧವನ್ನು ಇರಿಸಿದ್ದರು ಮತ್ತು ಮಕ್ಕಳೊಡನೆ ಸಹ ಉಪದೇಶಿಸಿದರು. ಖಿಲಾಫತಿನೊಂದಿಗೆ ಆಳವಾದ ಸಂಬಂಧ ಪರಿಪೂರ್ಣವಾದ ಅನುಸರಣೆ ಸ್ವತಃ ಇರಿಸಿದರು ಮತ್ತು ಮಕ್ಕಳಿಗೂ ಕಲಿಸಿದರು. ಜಮಾಅತಿನ ಸೇವೆಗಾಗಿ ಸದಾ ತಯಾರಾಗುತ್ತಿದ್ದರು. ಚಿಕ್ಕಂದಿನಿಂದಲೇ ನಮಾಝ್ ಮತ್ತು ಇಸ್ಲಾಮಿಕ ಸಂಗತಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು ಮತ್ತು ಉಪದೇಶಿಸುತ್ತಿದ್ದರು. ರಸ್ತೆಯಲ್ಲಿ ನಡೆಯುವಾಗಲೂ ಸೃಷ್ಟಿ ಸೇವೆ ಮಾಡುತ್ತಿದ್ದರು ಮತ್ತು ಜನರಿಗೆ ಸೌಲಭ್ಯವನ್ನು ಉಂಟುಮಾಡಲು ಹೇಳುತ್ತಿದ್ದರು. ಧನತ್ಯಾಗದ ಕಡೆ ವಿಶೇಷವಾದ ಗಮನವಿತ್ತು. ಧನತ್ಯಾಗದ ನಂತರ ಮನೆಯ ಖರ್ಚು ನೋಡುತ್ತಿದ್ದರು. ದಿನಾಲೂ ಪವಿತ್ರ ಖುರ್‌ಆನಿನ ಪಾರಾಯಣ ಮಾಡುತ್ತಿದ್ದರು ಮತ್ತು ನಮ್ಮನ್ನೂ ಉಪದೇಶಿಸುತ್ತಿದ್ದರು. ರಕ್ತಸಂಬಂಧಕ್ಕೆ ಬೆಲೆಕೊಡುತ್ತಿದ್ದರು ಮತ್ತು ಪ್ರತಿ ಬಡ ಮತ್ತು ಶ್ರೀಮಂತ ಸಂಬಂಧಿಕರೊಂದಿಗೆ ಸಂಬಂಧವಿರಿಸುವುದು ಅವರ ವಿಶೇಷತೆಯಾಗಿತ್ತು ಮತ್ತು ನಮ್ಮೊಡನೆ ಉಪದೇಶಿಸುತ್ತಿದ್ದರು. ತಬ್ಲೀಗ್ ಮಾಡಲು ಸದಾ ತಯಾರಾಗಿದ್ದರು. ತಹಜ್ಜುದ್ ನಿರ್ವಹಿಸಲು ಪದೇ ಪದೇ ಹೇಳುತ್ತಿದ್ದರು. ಅರಿವು ವರ್ಧಿಸಲು ಉಪದೇಶಿಸುತ್ತಿದ್ದರು. ಯಾವಾಗಲೂ ಮುಗುಳ್ನಗುತ್ತಿರಲು ಮತ್ತು ಯಾರ ಕೇಡನ್ನು ಬಯಸದಿರಲು ಹೇಳುತ್ತಿದ್ದರು. ಅತಿಥಿ ಸತ್ಕಾರ ಮತ್ತು ಅತಿಥಿಗಳನ್ನು ಗೌರವಿಸುವುದು ಅವರ ಗುಣವಾಗಿತ್ತು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಹಾಗು ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳಲ್ಲೂ ಅವರ ಒಳಿತುಗಳನ್ನು ಇರಿಸಲಿ ಮತ್ತು ಅವುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝಃ ಜರ್ಮನಿಯ ದಾವೂದ್ ಸುಲೈಮಾನ್ ಬಟ್ ಸಾಹಿಬ್‌ರದ್ದಾಗಿದೆ. 46ನೇ ವಯಸ್ಸಿನಲ್ಲಿ ಕ್ಯಾನ್ಸರ್ ಕಾರಣದಿಂದ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮುತ್ತಾತರಾದ ಹಝ್ರತ್ ಅಬ್ದುಲ್ ಹಕೀಂ ಬಟ್ ಸಾಹಿಬ್‌ರ ಮೂಲಕ ಅಹ್ಮದಿಯ್ಯತ್ ಅವರ ಕುಟುಂಬದಲ್ಲಿ ಪ್ರವೇಶಿಸಿತು. ಅವರು ಹಝ್ರತ್ ಮಸೀಹ್ ಮೌಊದ್‌ರ(ರ) ಸಹಾಬಿಯಾಗಿದ್ದರು. ಅವರು ಪತ್ನಿಯನ್ನಲ್ಲದೆ ಒಂದು ಪುತ್ರಿಯನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಅವರ ಪತ್ನಿಯಾದ ಸಮೀರ ದಾವೂದ್ ಸಾಹಿಬರ ಹೇಳುತ್ತಾರೆ: ಸದಾ ಜಮಾಅತಿನ ಸೇವೆಗಾಗಿ ತಯಾರಿರುತ್ತಿದ್ದರು. ಹೇಗಾದರೂ ಜಮಾಅತಿಗೆ ಹೆಚ್ಚು ಹೆಚ್ಚು ಸೇವೆ ಮಾಡಲು ಪ್ರಯತ್ನಿಸುತ್ತಿದ್ದರು. ಯಥಾರ್ಥ ಅರ್ಥದಲ್ಲಿ ದೀನಿಗೆ ಲೌಕಿಕತೆಯ ಮೇಲೆ ಆದ್ಯತೆ ನೀಡುವ ವ್ಯಕ್ತಿಯಾಗಿದ್ದರು. ಅವರ ಮುಖದಲ್ಲಿ ಸದಾ ಮುಗುಳ್ನಗೆ ಇರುತ್ತಿತ್ತು, ದಾನಧರ್ಮಗಳಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದರು ಮತ್ತು ಸದಾ ಸೇವೆಗಾಗಿ ತಯಾರಾಗುತ್ತಿದ್ದರು ಎಂದು ಅವರ ಎಲ್ಲ ಪರಿಚಿತರು ಹೇಳುತ್ತಾರೆ. ಜರ್ಮನಿಯಲ್ಲಿ ಹಿಫಾಝತೇ ಖಾಸಿನ ಡ್ಯೂಟಿ ನೀಡುತ್ತಿದ್ದರು. ಹಸನ್ಮುಖರಾಗಿ ಮತ್ತು ಪರಿಪೂರ್ಣವಾದ ಉತ್ತರದಾಯಿತ್ವದಿಂದ ಡ್ಯೂಟಿ ನೀಡುತ್ತಿದ್ದರು. ಅವರ ಒಂದು ವಿಶೇಷತೆಯೇನಾಗಿತ್ತು ಎಂದರೆ, ಪ್ರತಿಯೊಂದು ಕೆಲಸ ಶುರುಮಾಡುವುದಕ್ಕೆ ಮುಂಚಿತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು. ಸದಾ ಸಂತೋಷದಿಂದ ಡ್ಯೂಟಿ ನೀಡುತ್ತಿದ್ದದ್ದಾಗಿ ನಾನು ಸಹ ನೋಡಿದ್ದೇನೆ. ಅಲ್ಲಾಹನು ಅಗಲಿದವರಿಗೆ ಸಹನೆ ಮತ್ತು ಧೈರ್ಯ ನೀಡಲಿ ಹಾಗೂ ಮಕ್ಕಳಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

ಮುಂದಿನ ಪ್ರಸ್ತಾಪ ಸಿಯಾಲ್‌ಕೋಟ್ ಜಿಲ್ಲೆಯ ಗುಲಾಂ ಮುಸ್ತಫಾ ಸಾಹಿಬ್‌ರ ಪತ್ನಿಯಾದ ಝಾಹಿದ ಪರ್ವೀನ್ ಸಾಹಿಬರದ್ದಾಗಿದೆ. 61ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮಗಳಾದ ಹಿಬತುಲ್ ಕಲೀಂ ಸಾಹಿಬ, ಇವರು ರಶ್ಯದ ಮುಬಲ್ಲಿಗರಾದ ಜಮೀಲ್ ತಬಸ್ಸುಂ ಸಾಹಿಬ್‌ರ ಪತ್ನಿಯಾಗಿರುವರು. ಅವರು ಹೇಳುತ್ತಾರೆ: ನನ್ನ ತಾಯಿ ಅಲ್ಲಾಹನ ಅನುಗ್ರಹದಿಂದ ಜನ್ಮತಃ ಅಹ್ಮದಿಯಾಗಿದ್ದರು. ಮೂಸಿಯಾಗಿದ್ದರು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಂದೆ ಮತ್ತು ತಾಯಿಯ ತಾತರಾದ ದೀವಾನ್ ಬಕ್ಷ್ ಆವಾನ್ ಸಾಹಿಬ್‌ರ ಮೂಲಕ ಬಂದಿತ್ತು. ಮಗಳು ಹೇಳುತ್ತಾಳೆ: ಅವರು ಎಂದಾದರೂ ತಹಜ್ಜುದ್ ನಿರ್ವಹಿಸದೇ ಇರುವುದಾಗಿ ನಾನು ಕಂಡಿಲ್ಲ. ಸದಾ ಜಮಾಅತಿನೊಂದಿಗೆ ಮತ್ತು ಅಹ್ಮದಿಯ್ಯಾ ಖಿಲಾಫತಿನೊಂದಿಗೆ ಪ್ರೀತಿಯ ಸಂಬಂಧವನ್ನು ಇರಿಸಲು ಉಪದೇಶಿಸುತ್ತಿದ್ದರು. ಒಬ್ಬ ಪುತ್ರನನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಮೂರು ದಾಮಾದ್ ವಖ್‌ಫೇ ಝಿಂದಗಿಯಾಗಿರುವರು. ಮುಬಲ್ಲಿಗರನ್ನು ವಿವಾಹಿತರಾಗಿರುವ ಇಬ್ಬರು ಪುತ್ರಿಯರು ತಮ್ಮ ಕುಟುಂಬಗಳೊಂದಿಗೆ ವಿದೇಶದಲ್ಲಿ ಇರುವರು. ಆದ್ದರಿಂದ ಕೊನೆಯ ಸಮಯದಲ್ಲಿ ತಾಯಿಯ ಬಳಿಗೆ ಬರಲು ಸಾಧ್ಯವಾಗಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಅವರ ಮಕ್ಕಳಿಗೆ ಸೌಭಾಗ್ಯ ನೀಡಲಿ.

ಮುಂದಿನ ಜನಾಝಃ ಚೌಧರಿ ಅಬ್ದುಲ್ ಹಯ್ಯ್ ಸಾಹಿಬ್‌ರ ಮಗನಾದ ರಾನಾ ಅಬ್ದುಲ್‌ವಹೀದ್ ಸಾಹಿಬ್‌ರದ್ದಾಗಿದೆ. ಜೂನ್ 26ರಂದು ಹೃದಯಾಘಾತದ ನಿಮಿತ್ತ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಅನ್ಸಾರುಲ್ಲಾಹ್‌ದಲ್ಲಿ ಅವರು ಬಹಳ ಪರಿಶ್ರಮದಿಂದ ಕೆಲಸ ಮಾಡಿದ್ದರು. ಅದಲ್ಲದೇ ಸೆಕ್ರಟರಿ ಝಿಯಾಫತ್, ಮಸ್ಜಿದ್ ಫಝಲಿನ ಸೆಕ್ರಟರಿ ಮಾಲ್ ಮತ್ತು ಸೆಕ್ರಟರಿ ಝಿಯಾಫತ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಬಹಳ ಪರಿಶ್ರಮಿ ನೌಕರರಾಗಿದ್ದರು. ಬಹಳ ಖುಶಿಯಿಂದ ಎಲ್ಲ ಸೇವೆಗಳನ್ನು ಮಾಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಸಹನೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಜನಾಝಃ ಬಾಂಗ್ಲಾದೇಶದ ಮಾಜಿ ಜಮಾಅತ್ ಅಮೀರ್ ಆಗಿರುವ ಅಲ್‌ಹಾಜ್ ಮೀರ್ ಮುಹಮ್ಮದ್ ಅಲಿ ಸಾಹಿಬ್‌ರದ್ದಾಗಿದೆ. 84ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಲೋಕಲ್ ಮತ್ತು ನೇಶನಲ್ ಜಮಾಅತಿನಲ್ಲಿ ಅನೇಕ ಹುದ್ದೆಗಳಲ್ಲಿ ಇದ್ದರು. 1997ರಿಂದ 2003ರ ತನಕ ಬಾಂಗ್ಲಾದೇಶದ ನೇಶನಲ್ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅನಂತರ ಸೆಕ್ರಟರಿ ರಿಶ್ತನಾತ ಮತ್ತು ಸೆಕ್ರಟರಿ ತಬ್ಲೀಗ್ ಆಗಿ ಸೇವೆ ಸಲ್ಲಿಸಿದರು. 2013ರಿಂದ ಮರಣದ ವರೆಗೆ ಡಾಕಾ ಜಮಾಅತಿನ ಅಮೀರ್ ಆಗಿ ಸೇವೆ ಸಲ್ಲಿಸಿದರು. ಅವರ ಇಮಾರತ್ ಕಾಲದಲ್ಲಿ ಬಾಂಗ್ಲಾದೇಶ ಜಮಾಅತ್ ಸಾಕಷ್ಟು ಪ್ರಗತಿ ಹೊಂದಿತು. ವಿಶೇಷವಾಗಿ ಜಮಾಅತಿನ ಜಾಇದಾದ್ ಮತ್ತು ತಾಮೀರಾತಿನ ಕೆಲಸ ತುಂಬ ನಡೆಯಿತು. ಕೇಂದ್ರೀಯ ಮಿಶನ್ ಹೌಸ್‌ಗಳನ್ನು ಸಹ ಅವರು ನಿರ್ಮಿಸಿದರು. ಅನೇಕ ಮಸೀದಿಗಳನ್ನು ಸಹ ನಿರ್ಮಿಸಿದರು. ಬಹಳ ಒಳ್ಳೆಯ, ನಿಷ್ಠಾವಂತ, ಧರ್ಮಿಷ್ಠ, ಸಹಾನುಭೂತಿ ಹೊಂದಿದ್ದ, ದುಆ ಮಾಡುವ ಧನತ್ಯಾಗದಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದ, ಬಡವರಿಗೆ ನೆರವಾಗುವ, ಜನರಿಗೆ ಪ್ರಯೋಜನಕರವಾದ ವ್ಯಕ್ತಿಯಾಗಿದ್ದರು. ಖಿಲಾಫತಿನ ಪ್ರೇಮಿ ಮತ್ತು ಜಮಾಅತಿನ ಕ್ರಿಯಾಶೀಲ ಸೇವಕರಾಗಿದ್ದರು. ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಮಗಳನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ನಾನು ಹೇಳಿದಂತೆ ನಮಾಝಿನ ನಂತರ ಇವರೆಲ್ಲರ ಜನಾಝಃ ಗಾಇಬ್ ನಿರ್ವಹಿಸುವೆನು.

*(ಪುಟ ಸಂಖ್ಯೆ 02ರ ಉಳಿದ ಭಾಗ)*

ರೂಪಾಯಿಗಳು ಶೇಖ್ ಮುಹಮ್ಮದ್ ಹುಸೇನ್ ಅವರಿಗೆ ಠೇವಣಿ ರೂಪದಲ್ಲಿ ಕೊಡಲಾಗುವುದು. ಒಂದು ವರ್ಷದೊಳಗೆ ಶೇಖ್ ಮುಹಮ್ಮದ್ ಹುಸೇನ್ ಬಟಾಲ್ವಿ ಈ ಆಪತ್ತುಗಳಿಂದ ಉಳಿಯುವವರಾದರೆ ಆ ರೂಪಾಯಿಗಳು ಅವರ ಹಕ್ಕಾಗುವುದು. ಈಗಲೂ ನೀವು ಈ ವಿಧಾನವನ್ನು ಒಪ್ಪದಿದ್ದರೆ, ಅಶ್ಲೀಲ ಭಾಷೆಯಿಂದ ದೂರ ಸರಿಯಲಿಲ್ಲ ಎಂದಾದರೆ ನಾಚಿಕೆಯ ವಿಷಯವಾಗುವುದು. ನೆನಪಿರಲಿ ಮುಬಾಹಲದ ಒಂದು ವರ್ಷದೊಳಗೆಯೇ ಅಲ್ಲಾಹನು ನಮ್ಮ ಮೇಲೆ ಅನುಗ್ರಹದ ಮೇಲೆ ಅನುಗ್ರಹವನ್ನು ದಯಪಾಲಿಸಿದ್ದಾನೆ. ಅವನ ವಿಶೇಷವಾದ ನೆರವಿನಿಂದಗಿ ಸೌಭಾಗ್ಯದಿಂದಾಗಿ, ಉತ್ತಮೋತ್ತಮ ಗ್ರಂಥಗಳು ಬರೆಯಲ್ಪಟ್ಟಿವೆ. ಪವಿತ್ರ ಖುರ್‌ಆನ್‌ನ ನೂರಾರು ಸತ್ಯ ಸಾಕ್ಷ್ಯಗಳು ಜ್ಞಾನಗಳು ನಮಗೆ ಲಭಿಸಿವೆ. ನಮ್ಮ ಗ್ರಂಥಗಳು ಮುದ್ರಣಗೊಳ್ಳಲು ಮತ್ತು ನಮ್ಮ ಸಂಘಟನೆಯ ಕಾರ್ಯಗಳಿಗಾಗಿ ಸಾವಿರಾರು ರೂಪಾಯಿಗಳು ಬಂದಿವೆ. ಮತ್ತು ಸಾವಿರಾರು ಹೊಸಬರು ಸಂಪತ್ತು ಮತ್ತು ಜೀವ ತ್ಯಾಗ ಮಾಡುವವರು ನಮ್ಮ ಜಮಾಅತಿಗೆ ಸೇರಿದ್ದಾರೆ. ಅಂದ ಹಾಗೆ ಶೇಖ್ ಮುಹಮ್ಮದ್ ಹುಸೇನ್ ತನ್ನ ಆಣೆ ಮಾಡುವ ಸಮಯದಲ್ಲಿ ಈ ಎಲ್ಲಾ ಮಾತುಗಳನ್ನು ಗಮನದಲ್ಲಿರಿಸಿಕೊಂಡು ನಿರಾಕರಿಸಲಿ.

ಓ ಗಝುನಿ ಜನರೇ ನೀವು ದೂರ ಉಳಿಯುವುದೇ ನಿಮಗೆ ಒಳಿತಾಗುವುದು. ಅಲ್ಲಾಹನಿಂದ ಭಯಪಡಿರಿ. ಅವನೊಂದಿಗೆ ಯುದ್ಧ ಮಾಡಬೇಡಿರಿ. ಸ್ವಯಂ ಅವನು ಹಚ್ಚಿದ ದೀಪವನ್ನು ನೀವು ಆರಿಸಲಾರಿರಿ. ಅಂದ ಹಾಗೆ ಕಬ್ಬಿಣದ ಕೋಟೆಗೆ ತಲೆ ಹೊಡೆಯುವುದು ಬೇಡ. ನಿಮ್ಮ ಹೊಡೆತದಿಂದ ಕೋಟೆಯೇನು ಮುರಿದು ಹೋಗುವುದಿಲ್ಲ. ಅಂತಿಮವಾಗಿ ನಿಮ್ಮ ಶಿರವೇ ಪುಡಿಪುಡಿಯಾಗುವುದು. ನಿಮಗೆ ಸ್ವಲ್ಪವಾದರೂ ಭಯವಿಲ್ಲದೇ ಮುಸಲ್ಮಾನರಿಗೆ ಕಾಫಿರ್ ಎನ್ನುತ್ತೀರಿ, ಕಲಿಮ ಉಚ್ಛರಿಸುವವರನ್ನು ಅವಿಶ್ವಾಸಿ ಎನ್ನುತ್ತೀರಿ. ಕಾರ್ಯಕ್ಷಮತೆಯಲ್ಲಿ ಯಾವ ವ್ಯತ್ಯಾಸವಿದೆ, ತೋರಿಸಿರಿ. ನಾವೇನು ಬಹುದೇವರಾಧಕರೇ, ನಮಾಝುಗಳನ್ನು ಬಿಡುವವರೇ, ಉಪವಾಸ ಮತ್ತು ಇಸ್ಲಾಂ ತತ್ವಗಳನ್ನು ನಿರಾಕರಿಸುವವರೇ ಅಥವಾ ಹಲಾಲನ್ನು ಹರಾಮ್, ಹರಾಮ್‌ನ್ನು ಹಲಾಲ್ ಮಾಡಿದೇವೆಯೇ, ಏನಾದರೂ ತೋರಿಸಿರಿ. ಕಾರ್ಯಕ್ಷೇತ್ರದಲ್ಲಿ ಮತ್ತು ಇಸ್ಲಾಮಿನ ಮೂಲಭೂತ ವಿಶ್ವಾಸಗಳಲ್ಲಿ ನಮ್ಮಲ್ಲಿ ಮತ್ತು ನಿಮ್ಮಲ್ಲಿ ಯಾವ ವ್ಯತ್ಯಾಸವಿದೆ. (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಇನ್, ಸಂಪುಟ-9, ಪುಟ-32)

**ಮುಬಾಹಲ ನಂತರ ದೊಡ್ಡ ದೊಡ್ಡ ದೃಷ್ಟಾಂತಗಳ ಉಗಮ ಮತ್ತು ಮಹೋನ್ನತವಾದ ದೈವಿಕ ನೆರವು**

ಮುಬಾಹಲ ನಂತರ ಅಲ್ಲಾಹನು ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಮಹೋನ್ನತವಾದ ನೆರವು ನೀಡಿದನು. ಅವರ ಪರವಾಗಿ ದೊಡ್ಡ ದೊಡ್ಡ ದೃಷ್ಟಾಂತಗಳನ್ನು ತೋರಿಸಿದನು. ಅವರ ಪ್ರಖ್ಯಾತಿ ಮತ್ತು ಸ್ವೀಕೃತಿಯಲ್ಲಿ ಇನ್ನಷ್ಟು ಹೆಚ್ಚಳವಾಯಿತು. ಮತ್ತು ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಅಪಮಾನ ಹಾಗೂ ನಾಚಿಕೆ ಪಡಬೇಕಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಮತ್ತೆ ಅಬ್ದುಲ್ ಹಖ್ ಗಝ್ನವಿ ಎದ್ದು ಬಂದನು, ಎದುರಿನಲ್ಲಿ ಮುಬಾಹಲ ಗೈದು ಪ್ರಾರ್ಥಿಸಿದನು. ಸುಳ್ಳುಗಾರನ ಮೇಲೆ ಅಲ್ಲಾಹನ ಶಾಪವಿರಲಿ, ಅವನ ಎಲ್ಲಾ ಅನುಗ್ರಹ ಕಾರುಣ್ಯಗಳಿಂದ ವಂಚಿತರಾಗಲಿ, ಇಹಲೋಕದಲ್ಲಿ ಅವನ ಹೆಸರು ಗೌರವ ನಶಿಸಿಹೋಗಲಿ. ಅಂದ ಹಾಗೆ ನೀವು ನೋಡಿರಿ. ಈ ಪ್ರಾರ್ಥನೆಗಳ ಫಲವೇನಾಯಿತು. ಈಗ ಅವನು ಯಾವ ಸ್ಥಿತಿಯಲ್ಲಿದ್ದಾನೆ ಮತ್ತು ನಾವು ಯಾವ ಸ್ಥಿತಿಯಲ್ಲಿದ್ದೇವೆ! ನೋಡಿರಿ ಈ ಮುಬಾಹಲ ನಂತರ ವಿಶೇಷವಾದ ರೀತಿಯಲ್ಲಿ ಅಲ್ಲಾಹನು ನಮಗೆ ಪ್ರಗತಿ ನೀಡಿದನು ಮತ್ತು ದೊಡ್ಡ ದೊಡ್ಡ ದೃಷ್ಟಾಂತಗಳನ್ನು ತೋರಿಸಿದನು. ಆಕಾಶದಿಂದಲು ಮತ್ತು ಭೂಮಿಯಿಂದಲೂ, ಒಂದು ಲೋಕವೇ ನನ್ನೆಡೆ ರುಜುಪಡೆಯಿತು. ಮುಬಾಹಲ ಮಾಡುವಾಗ ಸುಮಾರು 40 ಜನರಷ್ಟೇ ನನ್ನ ಜೊತೆಗಿದ್ದರು. ಇಂದು 70 ಸಾವಿರ ಸಮೀಪ ಅವರ ಸಂಖ್ಯೆಯಾಗಿದೆ. ಸಾಂಪತ್ತಿಕ ವಿಜಯ ಇಲ್ಲಿಯವರೆಗೆ ಎರಡು ಲಕ್ಷಕ್ಕಿಂತ ಅಧಿಕ ದೊರೆತಂತಾಗಿದೆ. ಒಂದು ಲೋಕವೇ ಗುಲಾಮರ ರೀತಿ ನನ್ನ ಮೇಲೆ ನಂಬಿಕೆಯಿರಿಸಿದ್ದಾರೆ. ಭೂಮಿಯ ಇಲ್ಲಿಯ ಮೇರೆಗೆ ನನಗೆ ಖ್ಯಾತಿ ನೀಡಿದನು. ನೀವು ಮೊದಲು ಖಾದಿಯಾನಿಗೆ ಬಂದು ನೋಡಿರಿ. ನನ್ನ ನಂಬಿಗಸ್ತರ ಒಂದು ಸೈನ್ಯವೇ ಕಾಣುವಿರಿ ಮತ್ತು ಅಮೃತ್ಸರದಲ್ಲಿ ಅಬ್ದುಲ್ ಹಖ್ ಗಝ್ನವಿಯನ್ನು ಯಾವುದೋ ಒಂದು ಅಂಗಡಿಯ ಬಳಿ ಅಥವಾ ಪೇಟೆಯಲ್ಲಿ ನಡೆದಾಡುವುದನ್ನು ಕಾಣುವಿರಿ. ಅಕಟಾಕಟ! ಅಲ್ಲಾಹನ ಶಕ್ತಿ ಬಹಿರಂಗವಾಗಿ ಅವನ ನೆರವು ನನ್ನ ಪರವಾಗಿ ಆಕಾಶದಿಂದ ಅವತರಿಸುತ್ತಿರುವುದನ್ನು ಕಂಡು ಸಹ ಗುರುತಿಸುತ್ತಿಲ್ಲ. (ನುಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ-18, ಪುಟ-410)

**"ಅಬ್ದುಲ್ ಹಖ್ ಗಝ್ನವಿ ಮೇಲೆ ಬಿದ್ದ ಶಾಪಗಳು"**

ಸಯ್ಯಿದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅಬ್ದುಲ್ ಗಝ್ನವಿ ಮೇಲೆ ಅಲ್ಲಾಹನ ಶಾಪಗಳನ್ನು ಅವತರಿಸಿದ್ದನ್ನು ವಿವರಿಸಿದ್ದಾರೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸುತ್ತಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

**ಮೊದಲ ಶಾಪ (ಲಅನತ್):** ಏನೆಂದರೆ ಕ್ರೈಸ್ತರ ಪರವಹಿಸಿದ್ದರು. ಅಲ್ಲಾಹ್ ಮತ್ತು ಅವನ ಪ್ರವಾದಿಯ ಸತ್ಯ ಸಾಕ್ಷ್ಯಗಳನ್ನು ಸಾಬೀತುಪಡಿಸುವ ಚರ್ಚೆಯಲ್ಲಿ ಕ್ರೈಸ್ತರ ಪರವಹಿಸಿದರು ಮತ್ತು ಅವರ ವಿಜಯವನ್ನು ಒಪ್ಪಿಕೊಂಡರು. ನಾವು ಸಾಬೀತುಪಡಿಸಿದೆವು. ಈ ಪಾದರಿಗಳೇ ದಜ್ಜಾಲ್ ಆಗಿರುವರು ಎಂದು. ಆ ದಜ್ಜಾಲಿಗೆ ಪರವಾಗಿ ನಿಂತವರು. ಅವರ ಮಾತುಗಳಿಗೆ ಹೌದೆನ್ನುವವರು. ಸಹೀ ಮುಸ್ಲಿಮ್ ಹದೀಸಿನ ಪ್ರಕಾರ ಯಹೂದಿಗಳಾಗಲಿಲ್ಲವೇ. ಅವರು ಸುಮಾರು 70 ಸಾವಿರ ದಜ್ಜಾಲರ ಜೊತೆಯಲ್ಲಿರುವರು. ಜೊತೆಯಲ್ಲಿರುವವರು ಎಂದರೆ ಅವರ ಮಾತುಗಳಿಗೆ ದೃಢೀಕರಿಸುವುದಲ್ಲವೆ. ಹದೀಸಿನಲ್ಲಿ ಈ ಮಾತಿನ ಉಲ್ಲೇಖವಿದೆ. ಆ ಯಹೂದಿಗಳು ವಾಸ್ತವವಾಗಿ ಮುಸಲ್ಮಾನನಾಗಿರುವರು. ಆದರೆ ಯಹೂದ್ಯರ ರೀತಿ ತಮ್ಮ ತಪ್ಪುಗಳಿಗೆ ಅಂಟಿಕೊಳ್ಳುವರು. ಭೌತಿಕವಾದಿಗಳಾಗುವರು. ಆದುದರಿಂದ ಯಹೂದಿ ಎಂದು ಕರೆಯಲ್ಪಡುವರು. ಹದೀಸುಗಳನ್ನು ಯೋಚಿಸಿ ನೋಡಿದಾಗ ತಿಳಿಯಬಹುದು. ಈ ಯಹೂದಿಗಳು ಆ ಸಮಯ ದಜ್ಜಾಲನ್ನು ಹಿಂಬಾಲಿಸುವರು. ಕ್ರೈಸ್ತರೊಡನೆ ಮುಸಲ್ಮಾನರ ಸ್ಪರ್ಧೆಯಾದರೆ ಗೊಂದಲ ಸೃಷ್ಟಿಸುವರು. ಕ್ರೈಸ್ತರು ದುಷ್ಕರ್ಮವಹಿಸಿ ನಾವು ವಿಜಯಿಯಾದೆವು ಎನ್ನುವರು ಮತ್ತು ಮುಸಲ್ಮಾನರು ಹೇಳುವರು. ನಾವು ವಿಜಯಿಯಾದೆವು ಎಂದು. ಮುಸಲ್ಮಾನರಿಗೆ ಆಕಾಶವು ಸಾಕ್ಷಿ ನುಡಿಯುವುದು ಮತ್ತು ಆಕಾಶದಿಂದ ಧ್ವನಿ ಬರುವುದು. ಅಂದರೆ ದೇವವಾಣಿ ಆಗುವುದು. ಅಲ್‌ಹಖ್ ಫೀ ಆಲಿ ಮುಹಮ್ಮದ್, ಮುಹಮ್ಮದಿಯರು ಸತ್ಯಸಂಧಕರಾಗಿದ್ದಾರೆ ಮತ್ತು ಪ್ರಮಾದವಹಿಸಿ ಅದೊಂದು ಶೈತಾನಿನ ವಿಧಾನವಾಗಿದೆ. ಜನರಿಗೆ ಮೋಸ ಮಾಡುವರು. ಅಂದರೆ ಅವರು ಶೈತಾನನ ಕಡೆ ವಾಲುವರು, ಅವರು ಹೇಳಿದ್ದೆಲ್ಲ ಹೌದೆಂದು ಸಮ್ಮತಿಸುವರು. ಅಂತಿಮವಾಗಿ ಅಲ್ಲಾಹನು ತೀರ್ಪು ನೀಡುವನು ಮತ್ತು ಇಸ್ಲಾಮಿನ ಪರವಾಗಿ ಸ್ಪಷ್ಟವಾದೊಂದು ದೃಷ್ಟಾಂತ ತೋರಿಸುವನು. ಆಗ ಕೆಲವರು ಅಪಮಾನಿತರಾಗಿ ದಜ್ಜಾಲಿನ ಪರ ವಹಿಸುವರು. ಇವು ಹದೀಸು ವ್ಯಾಖ್ಯಾನಗಳ ಸಾರಾಂಶವಾಗಿದೆ. ಅದರ ಮೇಲೆ ಗಾಢವಾಗಿ ಯೋಚಿಸಬೇಕು.

**ಎರಡನೆಯ ಶಾಪ (ಲಅನತ್):**

ಈ ಶಾಪವು ಖುಸುಫ್ ಕಸುಫ್ (ಸೂರ್ಯ ಚಂದ್ರಗ್ರಹಣ) ದ್ದಾಗಿದೆ. ಇದು ಸಹ ನಮ್ಮ ವಿರೋಧಿಗಳಿಗೆ ಅಪಮಾನಗೊಳಿಸಲು ಕಡಿಮೆಯೇನಲ್ಲ. ಅವರಲ್ಲಿ ಸ್ವಲ್ಪವಾದರೂ ನಾಚಿಕೆಯಿದ್ದರೆ, ಆಕಾಶದ ಸಾಕ್ಷಿಯು ದೈವಿಕ ಸಾಕ್ಷಿಯಾಗಿದೆ. ಹದೀಸಿನ ಭವಿಷ್ಯವಾಣಿ ಪೂರ್ಣಗೊಂಡಿದೆ. ಅದನ್ನು ತಿರಸ್ಕರಿಸುವುದೆಂದರೆ ಅದು ಶಾಪವೋ ಅಥವಾ ಅಲ್ಲವೋ. ಅದು ಶಾಪವಲ್ಲ ಎಂದಾದರೆ, ಯಾವೊಬ್ಬ ದಾವೆದಾರನ ಉದಾಹರಣೆಯಾದರೂ ತೋರಿಸಿ ಅವನ ದಾವೆಗೆ ಸಾಕ್ಷಿಯಾಗಿ ರಂಝಾನ್ ತಿಂಗಳಿನಲ್ಲಿ ಸೂರ್ಯ, ಚಂದ್ರ, ಗ್ರಹಣ ಒಟ್ಟಾಗಿರಬೇಕು. ಅದು ಲೋಕಸೃಷ್ಟಿಯಾದಾಗಿನಿಂದ ಆದದ್ದಲ್ಲ.

**ಮೂರನೇ ಶಾಪ (ಲಅನತ್):**

ಈ ಶಾಪವು ನನ್ನ ಗ್ರಂಥಗಳ ಎದುರಾಗಿ ಬರೆಯಲು ಆಹ್ವಾನಿಸಿದ್ದನ್ನು ಬರೆಯಲು ಸಾಧ್ಯವಾಗದೇ ಹೋದದ್ದಾಗಿದೆ. ಅದರಲ್ಲಿ ಸ್ಪಷ್ಟವಾಗಿದೆ ಅವರ ಮೇಲೆ ಶಾಪ ಕೋರಲಾಗಿತ್ತು. ಅವರು ಕಾಫಿರ್ ಅಥವಾ ಧರ್ಮ ನಿರಾಕರಣೆ ಮಾಡಿಯೂ ಎದುರಿಸಲಾರದಂತಾಯಿತು. ವಾಸ್ತವವಾಗಿ ಈ ಶಾಪವು ಕಡಿಮೆಯೇನಲ್ಲ. ಬದಲು ಒಂದು ಸಾವಿರ ಶಾಪವಾಗಿದೆ. ಅದು ಸರಪಳಿಯಂತೆ ಒಂದಕ್ಕೊಂದು ಜೋಡಿಸಿದರೆ ಒಂದು ಉದ್ದವಾದ ಹಗ್ಗವೇ ಆದೀತು. ಅದು ಎಲ್ಲಾ ಕಾಫಿರ್ ಹೇಳುವವರ ಕುತ್ತಿಗೆಗೆ ಗಲ್ಲು ಹಾಕಲು ಸಾಕಾದೀತು. ಮತ್ತು ಅವರ ನಾಚಿಕೆಗೇಡುತನಕ್ಕೆ ಆಶ್ಚರ್ಯವಾಗುತ್ತದೆ. ಇಂದಿಗೂ ಅದೇ ಹೇಳುತ್ತಿದ್ದಾರೆ. ಯಾವ ಶಾಪವು ಬೀಳಲಿಲ್ಲ ಎಂದು. ಅಲ್ಲಾಹನ ಮತ್ತು ಅವನ ಪ್ರವಾದಿಯ ಪರವಾಗಿ ಏರ್ಪಡಿಸಿದ ಚರ್ಚೆಯಲ್ಲಿ ಕ್ರೈಸ್ತರ ಪರ ವಹಿಸುವುದು ಶಾಪವಲ್ಲವೇ. ಈ ಸಾವಿರ ಶಾಪಗಳ ಉದ್ದವಾದ ಹಗ್ಗ ಯಾವ ಲೆಕ್ಕಕ್ಕೆ ಇಲ್ಲವೇ. ಮತ್ತು ಅದರಿಂದ ಯಾವ ಅಪಮಾನವು ಉಂಟಾಗಲಿಲ್ಲವೇ. ಅದರಿಂದ ಸಾಬೀತಾಗುವುದೇನೆಂದರೆ ನಮ್ಮ ಕಾಫಿರ್ ಹೇಳುವವರ ಮಾನ ತುಂಬ ಗಡಸಾಗಿದೆ. ಎಷ್ಟು ಪೆಟ್ಟು ಬಿದ್ದರೂ ಮಾನದಲ್ಲಿ ಯಾವ ಭಂಗವು ಉಂಟಾಗುವುದಿಲ್ಲ.

**ನಾಲ್ಕನೆಯ ಶಾಪ (ಲಅನತ್):**

ಕ್ರೈಸ್ತರ ಬಗ್ಗೆ ಭವಿಷ್ಯವಾಣಿ ಪೂರ್ಣಗೊಂಡದ್ದನ್ನು ವಿವರಿಸಲಾಗಿದೆ. ಈ ಶಾಪ ವಾಸ್ತವದಲ್ಲಿ ಹಲವು ಶಾಪಗಳ ಮಿಶ್ರಣವಾಗಿದೆ. ಅದನ್ನು ವಿವರಿಸಬೇಕಾಗಿಲ್ಲ.

**ಐದನೆಯ ಶಾಪ (ಲಅನತ್):**

ಅತೀ ಶೀಘ್ರದಲ್ಲಿ ಬೀಳಲಿದೆ. ಅದಾವುದೆಂದರೆ ಸ್ಪಷ್ಟವಾದ ಈ ವಿಜಯದ ನಂತರವು, ಅದು ನಾವು ಅಲ್ಲಾಹನ ಅನುಗ್ರಹದಿಂದ ಕ್ರೈಸ್ತರೊಂದಿಗಿನ ಚರ್ಚೆಯಲ್ಲಿ ಪಡೆದಿರುತ್ತೇವೆ. ಅಂದರೆ ಅವರಲ್ಲಿ ಒಬ್ಬರು ಮರಣ ಹೊಂದಿದರು. ಒಬ್ಬನು ಮರಣ ಸಮೀಪಕ್ಕೆ ತಲುಪಿದನು ಒಬ್ಬನು ಶೋಕಗ್ರಸ್ತನಾದನು. ಒಬ್ಬನ ಮೇಲೆ ಅಪಮಾನದ ಶಾಪ ಬಿತ್ತು. ಮತ್ತು ಒಬ್ಬನು ಎಷ್ಟೊಂದು ಭಯಭೀತನಾದನೆಂದರೆ ಅವನು ಜೀವಂತನಾಗಿಯೂ ಉಳಿಯಲಿಲ್ಲ. ಅವನು ಮರಣ ಹೊಂದಿಲ್ಲ. ಈಗಲು ನಮ್ಮ ವಿಜಯ ಈ ಗಝ್ನವಿ ಜನರು ಮತ್ತು ಇತರ ಕಾಫಿರ್ ಎನ್ನುವವರು ಒಪ್ಪಲಿಲ್ಲ ಎಂದಾದರೆ, ಆಥಮನಿಗೆ ಆಣೆ ವಹಿಸಲು ಸಿದ್ಧಗೊಳಿಸಲಿಲ್ಲ ಎಂದಾದರೆ ಅದಾಗ್ಯೂ ಎರಡು ಸಾವಿರ ರೂಪಾಯಿ ಪಡೆಬಹುದು. ಒಂದು ವರ್ಷ ಕಳೆದ ನಂತರ ಅದರ ಮಾಲೀಕನಾಗುವರು, ನಿಸ್ಸಂಶಯವಾಗಿ ಅದು ಅವರ ಮೆಲೆ ಅಲ್ಲಾಹನ ಶಾಪವಾಗಿದೆ. ಅವರು ಕುಕ್ಸಿತರಾಗಿ ಹೋದರು ಮತ್ತು ಹಂದಿಗಳೊಡನೆ ಸೇರಿದರು. ಬೇಕೆಂತಲೇ ಅಲ್ಲಾಹ್ ಮತ್ತು ಅವನ ಪ್ರವಾದಿಗೆ ಅಪಮಾನವಾಗುವಂತಹ ಮಾರ್ಗ ಹಿಡಿದಿದ್ದಾರೆ. ಇದೀಗ ನಾವು ಹೆಚ್ಚಿಗೆ ಏನೂ ಬರೆಯುವುದಿಲ್ಲ. ಅಷ್ಟಕ್ಕೇ ಕೊನೆಗೊಳಿಸುತ್ತೇವೆ. ಮಿಯಾ ಅಬ್ದುಲ್ ಹಖ್ ಅವರು ಈ ಉತ್ತರದಿಂದ ದುಃಖಪಡಬೇಕಾಗಿಲ್ಲ. "ಈಂ ಹುಮಾನೆ ಸಂಗ್ ಸತ್ ಕೆ ಬರ್‌ಸರೆ ಮನ್ ಝುದೀ. **ವ ಯಫವ್ವಿಝು ಅಮ್ರಿ ಇಲಲ್ಲಾಹಿ ಹುವ ನಿಮಲ್ ಮೌಲಾ ವ ನಿಮನ್ನಸೀರ್.** (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಈನ್, ಸಂಪುಟ-9, ಪುಟ-45)

**ಅಬ್ದುಲ್ ಹಖ್ ಮತ್ತು ಅವರ ಗುಂಪಿನ ಮೇಲೆ ಶಾಪಗಳ ಸಾವಿರ ಸಾವಿರ ಚಪ್ಪಲಿಗಳು:**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನ್ಯಾಯ ದೃಷ್ಟಿಯಿಂದ ನೋಡಬೇಕಾಗಿದೆ. ಸೂರ್ಯ, ಚಂದ್ರ, ಗ್ರಹಣದ ಎಷ್ಟೊಂದು ವೈಭವಪೂರ್ಣ ರೀತಿಯಲ್ಲಿ ಪೂರ್ಣಗೊಂಡಿದೆ. ನಮ್ಮ ದಾವೆಯ ಮೇಲೆ ಆಕಾಶವು ಸಾಕ್ಷಿಯಾಗಿದೆ. ಆದರೆ ಈ ಕಾಲಘಟ್ಟದ ದುಷ್ಕರ್ಮಿ ಮೌಲ್ವಿಗಳು ಅದನ್ನು ನಿರಾಕರಿಸುತ್ತಾರೆ. ವಿಶೇಷವಾಗಿ ದಜ್ಜಾಲುಗಳ ಸರದಾರರಾದ ಅಬ್ದುಲ್ ಹಖ್ ಗಝ್ನವಿ ಮತ್ತು ಅವನ ತಂದೆ, ಅಲೈಹಿಂ ನಿಅಲ ಲಅನಲ್ಲಾಹಿ ಅಲ್ಲ, ಅಲ್ಫ ಮರ್ರತಿನ್ ತನ್ನ ಅಪವಿತ್ರ ಪತ್ರಿಕೆಯಲ್ಲಿ ಅತ್ಯಂತ ತಕರಾರುವಹಿಸಿ ಹೇಳುತ್ತಾರೆ. ಈ ಭವಿಷ್ಯವಾಣಿ ಸಹ ಪೂರ್ಣಗೊಂಡಿಲ್ಲ ಎಂದು. ಓ ದುಷ್ಕರ್ಮಿ ದಜ್ಜಾಲನೇ ಭವಿಷ್ಯವಾಣಿ ಪೂರ್ಣಗೊಂಡಿದೆ. ಆದರೆ ಅವರ ದ್ವೇಷವು ಅವರಿಗೆ ಅಂಧನನ್ನಾಗಿ ಮಾಡಿದೆ. (ಝಮೀಮ ರಿಸಾಲ ಅಂಜಾಮೆ ಆಥಮ್, ಸಂಪುಟ-11, ಪುಟ-330)

**ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಹದೀಸಿನಲ್ಲಿ ಹಸ್ತಕ್ಷೇಪ ನಿಶ್ಚಯವಾಗಿಯೂ ಅಬ್ದುಲ್ ಹಖ್ ಅವರಿಗೆ ಒಂದು ದೊಡ್ಡ ಶಾಪವಾಗಿದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ನೀನು ಸತ್ಯವನ್ನು ಮರೆಮಾಚಲು ಈ ಸುಳ್ಳಿನ ಪಾಯಿಖಾನೆ ತಿಂದಿರುವೆ. ತನ್ನ ಈ ಪತ್ರಿಕೆಯಲ್ಲಿ ಅದರ ಶೀರ್ಷಿಕೆ. "ಸಿಯಾನತುಲ್ ಅನಾಸ್ ಅನ್ ಶರ್‍ರಿಲ್ ವಸವಾಸಿಲ್ ಖನ್ನಾಸ್, ಚಂದ್ರಗ್ರಹಣದ ತಾರೀಖು 13 ರಂಝಾನ್ ಬದಲು 14 ರಂಝಾನ್ ಎಂದು ಬರೆಯಲಾಗಿದೆ. ಮತ್ತು ಸೂರ್ಯ ಗ್ರಹದ ತಾರೀಖು 28 ರಂಝಾನ್ ಬದಲಿಗೆ 29 ರಂಝಾನ್ ಎಂದು ಬರೆಯಲಾಗಿದೆ. ಅಂದ ಹಾಗೆ ಓ ದುಷ್ಟನೇ, ಅಲ್ಲಾಹ್ ಮತ್ತು ಅವನ ಪ್ರವಾದಿಯ ಶತ್ರುವೇ ನೀನು. ಯಹೂದಿಯರ ರೀತಿಯಲ್ಲಿ ಪೈಗಂಬರ್(ಸ) ರವರ ಒಂದು ಮಹೋನ್ನತವಾದ ದೃಷ್ಟಾಂತವನ್ನು ಲೋಕದ ದೃಷ್ಟಿಯಿಂದ ತಪ್ಪಿಸಲು ಹಸ್ತಕ್ಷೇಪ ಮಾಡಿರುವೆ. (ಅದೇ ಪುಟ 334).

ಮುಂದಿನ ಸಂಚಿಕೆಯಲ್ಲಿ ನಾವು ಮೌಲ್ವಿ ಅಬ್ದುಲ್ ಹಖ್ ಗಝ್ನವಿ ಅವರ ಮೇಲೆ ಬೀಳುವ ಇನ್ನು ಕೆಲವು ಅಪಮಾನಗಳ ಹಾಗೂ ಶಾಪಗಳ ವಿವರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳ ದೃಷ್ಟಿಯಿಂದ ಪ್ರಸ್ತುತಪಡಿಸಿವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಬಯಕೆ ವ್ಯಕ್ತಪಡಿಸುವರು.

ಈ ಅರ್ಥಗಳು ಸಹ ಸರಿಯಾಗಿವೆ. ಅದರ ಮೇಲೇನೂ ಆಕ್ಷೇಪವಿಲ್ಲ. ಏಕೆಂದರೆ ವಿನಾಕಾರಣ ಒಬ್ಬರಿಂದ ಶತ್ರುತನ ಹೊಂದಿದರೆ, (ಅಂದರೆ ಅರಬಿಯ ಅವಿಶ್ವಾಸಿಗಳು ಹಝ್ರತ್ ರಸೂಲುಲ್ಲಾಹ್(ಸ) ರೊಂದಿಗೆ ಹೊಂದಿದ ರೀತಿ). ಶತ್ರುಗಳ ಪ್ರಗತಿ ಕಂಡು ಮನುಷ್ಯನಿಗೆ ಹೆಚ್ಚಾಗಿ ಆ ಭಾವನೆಗಳು ಬರುತ್ತವೆ. ನಾನು ಅವರೊಂದಿಗೆ ಶತ್ರುತನ ಬೆಳೆಸದಿದ್ದರೆ ಚೆನ್ನಾಗಿರುತ್ತಿತ್ತು ಇಂದು ನಾನು ಅದರಿಂದ ಪ್ರಯೋಜನ ಪಡೆಯುತ್ತಿದ್ದೆ ಎಂದು. ಹಝ್ರತ್ ರಸೂಲುಲ್ಲಾಹ್(ಸ) ರೊಂದಿಗಿನ ಶತ್ರುತ್ವ ಕೇವಲ ಹೊಟ್ಟೆಕಿಚ್ಚಿನ ಕಾರಣದಿಂದಾಗಿತ್ತು. ಅವರ ಅಸಾಧಾರಣ ರೀತಿಯ ಪ್ರಗತಿಗಳನ್ನು ಕಂಡು ಅವರಿಗೆ ಹೊಟ್ಟೆಕಿಚ್ಚಿನಿಂದ ಮತ್ತೆ ಮತ್ತೆ ಅವರಿಗೆ ಅನಿಸುತ್ತಿತ್ತು. ತಾವು ಮುಸ್ಲಿಂ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು.

ಅದೇ ರೀತಿ ಬದರ್ ಯುದ್ಧದಲ್ಲಿ ಕೊಲ್ಲಲ್ಪಡುತ್ತಿರುವಾಗ ಅವರು ಬಯಸುತ್ತಿದ್ದರೆ. ತಾವು ಮುಸ್ಲಿಮ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು.

ಅಂತೂ ಇಸ್ಲಾಮಿನ ವಿಜಯಗಳು ಶತ್ರುಗಳ ಹೃದಯಗಳಲ್ಲಿ ಈ ಆಸೆ ಹುಟ್ಟಿಸುತ್ತಿತ್ತು. ನಾವು ಸಹ ಅವರ ಜೊತೆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದು. ಕಪಟವಿಶ್ವಾಸಿಗಳ ಹೇಳಿಕೆಗಳಂತೂ ಪವಿತ್ರ ಖುರ್‌ಆನ್‌ನಲ್ಲಿ ಸುಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಅವಿಶ್ವಾಸಿಗಳ ಸ್ಥಿತಿಯು ಹಾಗೆಯೇ ಇದ್ದಿರಬಹುದು. ಅದೊಂದು ಸಹಜ ಮಾತಾಗಿದೆ. ಅದನ್ನು ಅಲ್ಲಗಳೆಯಲಾಗದು.

ನನ್ನ ದೃಷ್ಟಿಯಲ್ಲಿ ಇವುಗಳಲ್ಲದೇ ವಚನದ ಇನ್ನೊಂದು ಅರ್ಥವು ಇದೆ. ವಿಶ್ಲೇಷಕರು ಸಾಮಾನ್ಯವಾಗಿ ಬಾಹ್ಯ ಅಭಿರುಚಿ, ವಾಕ್ಚಾತುರ್ಯ ಮತ್ತು ಪವಾಡಗಳ ಕುರಿತು ಚರ್ಚಿಸಿರುತ್ತಾರೆ. ನನ್ನ ದೃಷ್ಟಿಯಲ್ಲಿ ಸರ್ವಶ್ರೇಷ್ಠ ಕಾರಣ ಯಾವುದಕ್ಕೆ ಪವಿತ್ರ ಖುರ್‌ಆನ್ ಅವತರಿಸಿದೆ. ಅದು ಅದರ ಪರಿಪೂರ್ಣ ಮತ್ತು ಮನಮೋಹಕ ಶಿಕ್ಷಣವಾಗಿರುತ್ತದೆ. ಅದರೆಡೆಯೇ ಸಂಕೇತಿಸುತ್ತಾ "ಲೆಲ್ಕಿ ಆಯತುಲ್ ಕಿತಾಬಿ" ಎಂದು ಹೇಳಲಾಗಿದೆ ಮತ್ತು ವಚನ "ರುಬಮಾ ಯುವದ್ದುಲ್-ಲಝೀನ ಕಫರೂ" ನಲ್ಲಿ ಅದೇ ಶೈಕ್ಷಣಿಕ ಗುಣಗಳ ಬಗ್ಗೆ ಹೆಮ್ಮೆ ತೋರಿಸಲಾಗಿದೆ. ಅಂದರೆ ಇಸ್ಲಾಮಿ ಶಿಕ್ಷಣಗಳ ಗುಣಗಳನ್ನು ಕಂಡು ಅವಿಶ್ವಾಸಿಗಳು ತಮ್ಮ ಅಭಿಲಾಷೆಯನ್ನು ಹೀಗೆ ವ್ಯಕ್ತಪಡಿಸುತ್ತಿದ್ದರು. ತಾವು ಸಹ ಮುಸ್ಲಿಮ್ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಇದು ಸದಾಕಾಲಕ್ಕೂ ಆಗುತ್ತಾ ಬಂದಿದೆ ಮತ್ತು ಆಗುತ್ತಿರುವುದು.

ಹಝ್ರತ್ ಉಮರ್(ರ) ರೊಂದಿಗೆ ಯಹೂದಿ ಒಬ್ಬನು ಹೇಳಿದನು. ಪವಿತ್ರ ಖುರ್‌ಆನ್‌ನಲ್ಲಿ ಒಂದು ವಚನವಿದೆ. ಅದು ನಮ್ಮ ಗ್ರಂಥದಲ್ಲಿ ಅವತರಿಸುತ್ತಿದ್ದರೆ ನಾವು ಆ ದಿನವನ್ನು ಹಬ್ಬವನ್ನಾಗಿ ಆಚರಿಸುತ್ತಿದ್ದೆವು. ಹಝ್ರತ್ ಉಮರ್(ರ) ಕೇಳಿದರು. ಅದು ಯಾವ ವಚನ ಆಗಿದೆ? ಅವನು ಉತ್ತರಿಸಿದನು. "ಅಲ್‌ವತಾಮ ಅಕ್ಮಲ್ತು ಲಕುಂ ದೀನಕುಂ" ಆಗ ಅವರು ಹೇಳಿದರು ಆ ದಿನವಂತೂ ನಮಗೆ ಎರಡು ಹಬ್ಬಗಳ ದಿನವಾಗಿತ್ತು. ಅಂದರೆ ಜುಮುಅ ದಿವಸ ಮತ್ತು ಅರಫಾ ದಿನದಂದು ಈ ವಚನ ಅವತರಿಸಿತ್ತು. ಹಾಗೆಯೇ ಇನ್ನೊಬ್ಬ ಯಹೂದಿ ಹೇಳಿದನು. ನಿಮ್ಮ ಶರೀಅತ್ತಿನಲ್ಲಿ (ಧರ್ಮ ಸಂಹಿತೆಯಲ್ಲಿ) ಮಾನವ ಜೀವನಕ್ಕೆ ಸಂಬಂಧಿಸಿದ ಯಾವ ಅಂಶವನ್ನು ಬಿಡದಿರುವುದನ್ನು ಕಂಡು ಆಶ್ಚರ್ಯವಾಗುತ್ತದೆ! ಈ ಮನೋಕಾಮನೆಗಳು ಸಾವಿರಾರು ಹೃದಯಗಳಲ್ಲಿ ಉಂಟಾಗಿರಬಹುದು. ಆದರೆ ಅದರ ಪ್ರಕಟಣೆ ಒಬ್ಬರು ಇನ್ನೊಬ್ಬರ ಬಾಯಿಯಿಂದ ಹೊರಟಿದೆ. ಮತ್ತು ಪವಿತ್ರ ಖುರ್‌ಆನ್ ಸಹ ಹೇಳಿದೆ. (ಅವರ ಹೃದಯಗಳು ಬಯಸುತ್ತವೆ) ಯಖೂಲೂ ಅನ್ನಲಿಲ್ಲ. (ಅಂದರೆ ಅವರು ತಮ್ಮ ನಾಲಿಗೆಯಿಂದ ಹೇಳುತ್ತಿದ್ದಾರೆ) ಅನ್ನಲಿಲ್ಲ. ಈ ಕಾಲದಲ್ಲಿಯೂ ತಲಾಖ್ ಸಮಸ್ಯೆ, ಮದ್ಯಸೇವನೆಯ ಸಮಸ್ಯೆ, ಆಸ್ತಿ ಬಳುವಳಿಯ ಸಮಸ್ಯೆ, ಹೀಗೆಯೇ ಹಲವು ಸಮಸ್ಯೆಗಳಿವೆ. ಅದರ ಮೇಲೆ ಲೋಕವು ಹೆಮ್ಮೆಪಡುತ್ತಿದೆ. ಒಬ್ಬ ಯೂರೋಪಿಯನ್ನಿನ ಭಾವನೆ ಆಗಿದೆ. ನಮ್ಮಲ್ಲಿಯೂ ತಲಾಖ್ ಬಗ್ಗೆ ಕಾನೂನು ಆಗಬೇಕಾಗಿದೆ ಎಂದರೆ ಇನ್ನೊಂದು ಅರ್ಥದಲ್ಲಿ ಅವನು. ನಾನು ಮುಸ್ಲಿಂ ಆಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದಾಗಿದೆ. ಹಾಗೆಯೇ ಒಬ್ಬ ಅಮೇರಿಕನ್ ಮದ್ಯಸೇವನೆ ನಿಷೇಧವಾಗಬೇಕು ಎಂಬ ಭಾವನೆ ಹೊಂದಿದರೆ ಅದು. "ರುಖಮಾ ಯವದ್ದುಲ್ ಲಝೀನ ಕಫರೂ ಲೌಕಾನೂ ಮುಸ್ಲಿಮೀನ್" ಅನ್ನು ದೃಢೀಕರಿಸಿದಂತೆಯೇ ಸರಿ. ಇತ್ತೀಚಿಗಿನ ಹಿಂದಿನ ಕೆಲದಿದ ಮಾತಾಗಿದೆ. ಭಾರತದ ವಿಧಾನಸಭೆಯ ಹಿಂದೂ ಸದಸ್ಯರೊಬ್ಬರು ಬಾಲ್ಯ ವಿವಾಹ ನಿಷೇಧದ ಕಾನೂನು ರಚಿಸಲು ಸಲಹೆಗಳನ್ನು ನೀಡಿದ್ದರು. ಅವರು ತನ್ನ ಭಾಷಣದಲ್ಲಿ ಹೇಳಿದರು. ಯಾವ ರೀತಿ ಇಸ್ಲಾಮ್ ಧರ್ಮವು ವಿವಾಹ ಸಂಬಂದಿತ ಕಾನೂನು ರಚಿಸಿ ಮುಸ್ಲಿಮ್ ಸಮುದಾಯಗಳನ್ನು ಸುರಕ್ಷಿತಗೊಳಿಸಿದೆ. ಅಂತಹದ್ದು ನಮ್ಮಲ್ಲಿಲ್ಲ.

ಈ ವಚನದಲ್ಲಿಯೂ "ರುಖಮಾ ಪದ ಬಳಸಲಾಗಿದೆ. ಅದು ಹಲವು ಅರ್ಥ ಒಳಗೊಂಡಿರುತ್ತದೆ. ಅಂದರೆ ಆ ಜನರಿಗೆ ಸಾಮೂಹಿಕವಾಗಿ ಇಸ್ಲಾಮ್ ಸ್ವೀಕರಿಸುವ ಭಾವನೆ ಉಂಟಾಗದಿದ್ದರೂ, ಬೇರೆ ಬೇರೆ ಸಮಸ್ಯೆಗಳ ಪ್ರಯುಕ್ತ ಅವರ ಹೃದಯಗಳಲ್ಲಿ ಈ ಬಯಕೆ ಬಂದಿರಬಹುದು. ಈ ಸಮಸ್ಯೆಯು ನಮ್ಮಲ್ಲಿರುತ್ತಿದ್ದರೆ ಎಷ್ಟು ಚೆನ್ನಾಗಿರುತಿತ್ತು. **(ತಫ್ಸೀರ್ ಕಬೀರ್, ಸಂಪುಟ-4, ಪುಟ-5 ಮುದ್ರಣ 2010 ಖಾದಿಯಾನ್)**

**ಹುಝೂರ್(ಸ) ನುಡಿದರು:** ***ಉರೀತುನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾಉ ಯಕ್ಫುರೂನ್***

**ಅಂದರೆ ನನಗೆ ನರಕದಲ್ಲಿ ತನ್ನ ಕರ್ಮಗಳಿಂದಾಗಿ ಮಹಿಳೆಯರೇ ಹೆಚ್ಚಾಗಿ ಕಂಡರು. ಅವರು ತನ್ನ ಪತಿಗೆ ಅವಿಧೇಯತೆ, ಕೃತಘ್ನತೆ ತೋರುವವರಾಗಿದ್ದರು.**

## ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

*(ಭಾಗ–2)*

**ಪ್ರಶ್ನೆ:** ಆಸ್ಟ್ರೇಲಿಯಾದ ವಾಖಿಫಾತ್ ಸಾವಿನ ಅದೇ ಕಾರ್ಯಕ್ರಮ ಗುಲ್ಶನೆ ವಕ್ಫೆ ನೌ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್‌ರ ಸೇವೆಯಲ್ಲಿ ಪ್ರಶ್ನೆ ಮಾಡಿದಳು. ರಂಝಾನಿನಲ್ಲಿ ಆವು ಯಾವ ವಯಸ್ಸಿನಲ್ಲಿ ಉಪವಾಸ ಪ್ರಾರಂಭಿಸಬೇಕು? ಈ ಪ್ರಶ್ನೆ ಉತ್ತರ ನೀಡುತ್ತಾ ಅವರು ಹೇಳಿದರು.

**ಉತ್ತರ:** ನಿಮ್ಮ ಪ್ರಕಾರ ರೂಪದಲ್ಲಿ ಪ್ರೌಢಾವಸ್ಥೆಗೆ ಬಂದಾಗ ನಿಮಗೆ ಉಪವಾಸ ಕಡ್ಡಾಯವಾಗುತ್ತದೆ. ನೀವು ವಿದ್ಯಾರ್ಥಿಯಾಗಿದ್ದರೆ, ನಿಮ್ಮ ಪರೀಕ್ಷೆಗಳು ನಡೆಯುತ್ತಿದ್ದರೆ ಆ ದಿನಗಳಲ್ಲಿ ನಿಮ್ಮ ವಯಸ್ಸು 13, 14, 15 ವರ್ಷಗಳಾಗಿದ್ದರೆ ನೀವು ಉಪವಾಸ ನಿರ್ವಹಿಸುವುದು ಬೇಡ, ನಿಮ್ಮಲ್ಲಿ ಸಹಿಸುವ ಶಕ್ತಿ ಇದ್ದರೆ 15 ವರ್ಷದ ವಯಸ್ಸಿನಲ್ಲಿ ಉಪವಾಸ ಇಡಬಹುದು. ಆದರೆ ಸಾಮಾನ್ಯವಾಗಿ ಉಪವಾಸವು 17, 18 ವರ್ಷಗಳ ಮೇಲೆ ಕಡ್ಡಾಯವಾಗುತ್ತದೆ. ಆನಂತರ ಉಪವಾಸ ಇಡಲೇಬೇಕಾಗಿದೆ. 8, 10 ವರ್ಷದ ವಯಸ್ಸಿನಲ್ಲಿ 3, 4, ಉಪವಾಸಗಳು ಐಚ್ಚಿಕವಾಗಿ ಇರಬಯಸುವುದಾದರೆ ಇರಬಹುದು. ಆದರೆ ಕಡ್ಡಾಯವೇನಲ್ಲ. ನೀವು ಪ್ರೌಢಾವಸ್ಥೆಗೆ ಬಂದಾಗ, ಶಕ್ತಿಬಂದಾಗ ನಿಮಗೆ ಉಪವಾಸ ಕಡ್ಡಾಯವಾಗಿರುವುದು, ಇಲ್ಲಿ (ಆಸ್ಟ್ರೇಲಿಯಾದಲ್ಲಿ ಲೇಖಕರು) ವಿವಿಧ ಋತುಗಳಲ್ಲಿ ಎಷ್ಟು ವ್ಯತ್ಯಾಸವಿರುತ್ತದೆ. Day night ಎಷ್ಟು ಗಂಟೆಯದ್ದಾಗಿರುತ್ತದೆ? ಹೌದು ನೀವು 19 ಗಂಟೆ ಹಸಿವಿನಿಂದ ಇರಲಾರಿರಿ. ಯು.ಕೆ ಯಲ್ಲೂ ಸಹ ಇಂದು. ಹಿಂದೆ ಕಳೆದ ಶೆಕೆಗಾಲದ ನಿಮ್ಮ ಉಪವಾಸ ಸಣ್ಣವಾಗಿದ್ದವು ಮತ್ತು ಅಲ್ಲಿ ದೀರ್ಘವಾಗಿದ್ದವು. 18 ವರೆ ಸ್ಥಳಗಳಲ್ಲೂ 22 ಗಂಟೆಗಳ ಉಪವಾಸವಿರುತ್ತದೆ. ಅಂತೂ ಅಲ್ಲಿ ಸಮಯವನ್ನು Adjust ಮಾಡಬೇಕಾಗುತ್ತದೆ. ಏಕೆಂದರೆ ಅಷ್ಟೊಂದು ದೀರ್ಘ ಸಮಯದ ಉಪವಾಸ ಇರಲಾಗದು. ಆದರೆ ಸಹನೆ ಶಕ್ತಿ ಬರುವುದು ಪ್ರೌಢಾವಸ್ಥೆಗೆ ಬಂದಾಗ, ಕನಷ್ಠ 17, 18 ವರ್ಷದವರಾದರೆ ಸರಿ. ಉಪವಾಸ ಮಾಡಬಹುದು. ತಿಳಿಯಿತಾ? ನಿಮ್ಮ ತಂದೆ ತಾಯಿಯರು ಏನು ಹೇಳುತ್ತಾರೆ? ಹತ್ತು ವರ್ಷದಲ್ಲಿ ಕಡ್ಡಾಯವಾಗಿದೆ ಎಂದು ಹೇಳುತ್ತಾರೆಯೇ? ಆದರೆ ಅಭ್ಯಾಸ ಮಾಡಿಕೊಳ್ಳಿ. ಸಣ್ಣ ಮಕ್ಕಳಿಗೆ ಸಹ 2, 3 ಉಪವಾಸ ರಂಝಾನ್‌ನಲ್ಲಿ ಇರಬಹುದಾಗಿದೆ. ಏಕೆಂದರೆ ರಂಝಾನ್ ಬಂದಿದೆ ಎಂದು ಅರಿವಾಗಬೇಕು. ಆದರೆ ಉಪವಾಸ ಇರದಿದ್ದರೂ ಬೆಳಿಗ್ಗೆ ಬೇಗ ಏಳಿರಿ. ತಂದೆ ತಾಯಿಯರ ಜೊತೆ ಸೆಹರಿ ಮಾಡರಿ. ನಫಲ್ ನಿರ್ವಹಿಸಿರಿ. ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಿರಿ, ನಿಮ್ಮ ಅಂದರೆ ವಿದ್ಯಾರ್ಥಿಗಳ ಮತ್ತು ಮಕ್ಕಳ ರಂಝಾನ್ ಎಂದರೆ ಏಳಬೇಕು, ಸೆಹರಿ ಉಣ್ಣಬೇಕು, ಅದರ ಮುಂಚೆ ಎರಡು ಅಥವಾ ನಾಲ್ಕು ನಫಲ್ ಅನುಷ್ಠಿಸಬೇಕು, ಮತ್ತೆ ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಬೇಕು, ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಠಿಸಬೇಕು.

**ಪ್ರಶ್ನೆ:** ಮಿತ್ರರೊಬ್ಬರು ಹುಝೂರ್ ಅನ್ವರ್(ಅಬಿಅ) ರವರ ಸೇವೆಯಲ್ಲಿ ಪ್ರಸ್ತಾಪಿಸಿದರು. ಇಸ್ಲಾಮಿನಲ್ಲಿ ಯಾವ ಆಧಾರದ ಮೇಲೆ ಜಾನುವಾರುಗಳ ಮಾಂಸವನ್ನು ತಿನ್ನುವುದು ಹಲಾಲ್ ಅಥವಾ ಹರಾಮ್ (ಧರ್ಮಬದ್ಧ ಅಥವಾ ಧರ್ಮನಿಷಿದ್ಧ) ಎಂದು ಪರಿಗಣಿಸಲಾಗುತ್ತದೆ?

ಹುಝೂರ್ ಅನ್ವರ್(ಅಬಿಅ) ತನ್ನ ಪತ್ರದಲ್ಲಿ ದಿನಾಂಕ: 11 ಏಪ್ರಿಲ್ 2016 ರಲ್ಲಿ ಅದರ ಉತ್ತರ ಈ ಕೆಳಗಿನಂತೆ ನೀಡಿರುವರು.

**ಉತ್ತರ:** ಒಂದು ವಸ್ತುವಿನ ಹಲಾಲ್ ಅಥವಾ ಹರಮ್ ಕುರಿತು ಇಸ್ಲಾಮ್ ಧರ್ಮದ ತತ್ವವೇನೆಂದರೆ ಶರೀಅತ್ ನಿಷಿದ್ಧಗೊಳಿಸದಂತಹವುಗಳು ಜಾಯಝ್ ಆಗಿರುತ್ತವೆ. ಅಂದ ಹಾಗೆ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. “ವಸ್ತುಗಳ ಪಾವಿತ್ರ್ಯತೆಯೇ ಅಸಲಾಗಿದೆ. ನಿರ್ಧಿಷ್ಟವಾಗಿ ಎಲ್ಲಿಯವರೆಗೆ ಅದರ ಪಾವಿತ್ರತ್ಯತೆ ಸಾಬೀತಾಗುವುದಿಲ್ಲ ಮಾನ್ಯತೆ ದೊರೆಯುವುದಿಲ್ಲ. (ಮಲ್ಫೂಝಾತ್, ಸಂಪುಟ–2, ಪುಟ–474)

ಪವಿತ್ರ ಖುರ್‌ಆನ್ ಸತ್ತ ಪ್ರಾಣಿ, ಹರಿದ ರಕ್ತ, ಹಂದಿ ಮಾಂಸ. ಮಲಿನವಾದುದು, ಅಲ್ಲಾನ ಹೊರತು ಇತರರಿಗೆ ಅರ್ಪಿಸಲ್ಪಟ್ಟಿದ್ದು ಹರಾಮ್ ಎಂದು ಪರಿಗಣಿಸಲಾಗಿದೆ. (ಸೂರ: ಅಲ್‌ಅನ್‌ಆಂ–146)

ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಈ ನಾಲ್ಕು ವಸ್ತುಗಳನ್ನು ಹರಾಮ್ ಎನ್ನಲಾಗಿದೆ. ಅದಾಗ್ಯೂ ಕೆಲ ವಸ್ತುಗಳನ್ನು ಹಝ್ರತ್ ರಸೂಲುಲ್ಲಾಹ್(ಸ) ನಿಷೇಧಿಸಿದರು. ಅದನ್ನು ಮಮ್ನು (ನಿಷೇಧಿಸಲ್ಪಟ್ಟದ್ದು) ಎನ್ನುತ್ತಾರೆ. ಉದಾಹರಣೆಗೆ ಬೇಟೆಯಾಡುವ ಜಾನುವಾರುಗಳು ನಿಷೇಧಿತವಾಗಿವೆ. ಅದರಲ್ಲಿ ಕ್ರೂರ ಪ್ರಾಣಿಗಳು, ಬೇಟೆಯಾಡುವ ಪಕ್ಷಿಗಳು ಇತ್ಯಾದಿ ಸೇರಿವೆ. ಈ ವಸ್ತುಗಳ ನಿಷೇದವು ಹದೀಸುಗಳಿಂದ ಸಾಬೀತಾಗಿದೆ. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. (ಸಹೀ ಮುಸ್ಲಿಂ)

ಅನುವಾದ:– ರಸೂಲುಲ್ಲಾಹ್(ಸ) ಚೂಪಾದ ಉಗುರುಗಳಿರುವ ಎಲ್ಲಾ ಮೃಗಗಳನ್ನು ಮತ್ತು ಪಕ್ಷಿಗಳನ್ನು ತಿನ್ನುವುದು ನಿಷಿದ್ಧ ಎಂದಿದ್ದಾರೆ. ಅದೇ ರೀತಿ ಹದೀಸಿನಲ್ಲಿ ಬರುತ್ತದೆ. (ಸಹೀ ಬುಖಾರಿ).

ಅನುವಾದ :ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಖೈಬರ್ ಯುದ್ಧ ಸಂದರ್ಭದಲ್ಲಿ ಸಾಕು ಕತ್ತೆಗಳ ಮಾಂಸ ತಿನ್ನುವುದನ್ನು ನಿಷೇಧಿಸಿದರು.

ಹರಾಮ್ ಮತ್ತು ಮಮ್ನು (ಧರ್ಮ ನಿಷಿದ್ಧ ಮತ್ತು ನಿಷಿದ್ಧ) ವ್ಯಾಖ್ಯಾನ ಮಾಡುತ್ತಾ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ನುಡಿಯುತ್ತಾರೆ.

“ನೆನಪಿಡಬೇಕಾದ ಕಾರ್ಯವೆಂದರೆ ಇಸ್ಲಾಮಿ ಶರೀಅತ್ತಿನಲ್ಲಿ ಯಾವ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಎರಡು ವಿಧಗಳದ್ದಾಗಿವೆ. ಪ್ರಥಮವಾಗಿ ಹರಾಮ್, ಎರಡನೆಯದು ಮಮ್ನು, ವ್ಯಾಕರಣ ದೃಷ್ಟಿಯಿಂದ ಹರಾಮ್ ಪದ ಎರಡೂ ಒಂದೇ ಅರ್ಥ ಕೊಡುವಂತಿದೆ. ಆದರೆ ಪವಿತ್ರ ಖುರ್‌ಆನ್ ಈ ವಚನ (ಅಲ್ ಬಖರ–174) ರಲ್ಲಿ ಕೇವಲ ನಾಲ್ಕು ವಸ್ತುಗಳನ್ನು ಹರಾಮ್ ಎಂದು ಹೇಳಿದೆ. ಅಂದರೆ ಸತ್ತ ಪ್ರಾಣಿ, ಹರಿದ ರಕ್ತ, ಹಂದಿ ಮಾಂಸ ಮತ್ತು ಅಲ್ಲಾಹೇತರರಿಗೆ ಅರ್ಪಿಸಿದ ಎಲ್ಲಾ ವಸ್ತುಗಳು, ಇದರ ಹೊರತಾಗಿಯೂ ಶರೀಅತ್ತಿನಲ್ಲಿ ಕೆಲ ಇನ್ನಿತರ ವಸ್ತುಗಳ ಬಳಕೆಯಿಂದಲೂ ತಡೆಯಲಾಗಿದೆ. ಆದರೆ ಆ ವಸ್ತುಗಳು “ಮಮ್ನುಅ ವಸ್ತುಗಳ ಪಟ್ಟಿಯಲ್ಲಿ ಬರುವುದು, ಖುರ್‌ಆನ್‌ನ ಪ್ರಕಾರ ಅವು ಹರಾಮ್ ಎಂದಾಗುವುದಿಲ್ಲ.

ಈ ಆಜ್ಞೆಗಳು ಈ ವಚನ ಅಥವಾ ಅನ್ಯವಚನಗಳ ವಿಷಯಗಳಿಗೆ ವಿರೋಧವಾಗಿಲ್ಲ. ಏಕೆಂದರೆ ಯಾವ ರೀತಿ ಆಜ್ಞೆಗಳು ಹಲವು ರೀತಿಯದ್ದಾಗಿರುತ್ತವೆ. ಕೆಲವು ಫರ್ಝ್ (ಕಡ್ಡಾಯ) ಇವೆ. ಕೆಲವು ವಾಜಿಬ್ ಇವೆ. ಮತ್ತು ಕೆಲವು ಸುನ್ನತ್ ಇವೆ. ಅದೇ ರೀತಿ ನಿಷೇಧಗಳು ಸಹ ಹಲವು ವಿಧಗಳದ್ದಾಗಿವೆ. ಒಂದು (ಸಹಿ ವಸ್ತುವೂ) ನಿರ್ಧಿಷ್ಟ ಹರಾಮ್ ಆಗಿದೆ. ಇನ್ನೊಂದು ಸಹಿ ಮಾನಿಅ (ನಕಾರಾತ್ಮಕ ನಿಷೇಧಿತ) ಇನ್ನೊಂದು ಸಹಿ ತನ್‌ಝೀಹಿ (ಇಷ್ಟವಿಲ್ಲದ ವಸ್ತುಗಳು ಮಕ್ರೂಹ್) ಅಂದಹಾಗೆ ಹರಾಮ್ ನಾಲ್ಕು ವಸ್ತುಗಳಾಗಿವೆ. ಉಳಿದವು ಮಮ್ನು (ನಿಷೇಧಿತವಾಗಿವೆ) ಅದಕ್ಕಿಂತ ಹೆಚ್ಚಾಗಿ ಮಕ್ರೂಹ್ ಇಷ್ಟವಿಲ್ಲದ (ತನ್‌ಝೋಹ್‌ಗಳಾಗಿವೆ) ಅಂದರೆ ಅದರಿಂದ ದೂರವಿರುವುದೇ ಮನುಷ್ಯನಿಗಾಗಿ ಹಿತವಿದೆ. ಹರಾಮ್ ಮತ್ತು ಮಮ್ನು ಪೈಕಿ ಫರ್ಝ್ ಮತ್ತು ವಾಜಿಬ್‌ನಲ್ಲಿರುವಷ್ಟೇ ವ್ಯತ್ಯಾಸವಿದೆ. ಅಂದ ಹಾಗೆ ಯಾವ ವಸ್ತುಗಳನ್ನು ಪವಿತ್ರ ಖುರ್‌ಆನ್ ಹರಾಮ್ (ನಿಷಿದ್ಧ) ಎಂದಿದೆಯೋ ಅದರ ಪಾವಿತ್ರ್ಯತೆ ಅತ್ಯಂತ ಕಠಿಣವಾಗಿದೆ. ಮತ್ತು ಯಾವುದನ್ನು ಹಝ್ರತ್ ರಸೂಲುಲ್ಲಾಹ್(ಸ) ನಿಷೇಧ ಎಂದಿರುವರೋ ಅದರ ಪಾವಿತ್ರ್ಯತೆ ಅದಕ್ಕಿಂತ ಕಡಿಮೆ ಪ್ರಮಾಣದ್ದಾಗಿದೆ ಮತ್ತು ನಾನು ಹೇಳಿದಂತೆ ಆದೇಶಗಳಲ್ಲಿ ಅದರ ಉದಾಹರಣೆ ಫರ್ಝ್, ವಾಜಿಬ್ ಮತ್ತು ಸುನ್ನದಂತಿದೆ. ಹರಾಮ್ ಎಂಬುದು ಫರ್ಝ್ ಸ್ಥಾನದಲ್ಲಿ ಬರುತ್ತದೆ. ಯಾವ ರೀತಿಯಲ್ಲಿ ಫರ್ಝ್ ಮತ್ತು ವಾಜಿಬ್ (ಕಡ್ಡಾಯ ಮತ್ತು ಅನಿವಾರ್ಯ) ಗಳಲ್ಲಿ ಶಿಕ್ಷೆಗಳನ್ನು ಗುರುತಿಸಲಾಗುತ್ತದೆಯೋ, ಅದೇ ರೀತಿಯ ವಸ್ತುಗಳ ಪಾವಿತ್ರ್ಯತೆ (ಹುರ್‌ಮತ್) ಪವಿತ್ರ ಖುರ್‌ಆನ್‌ನಲ್ಲಿ ಬಂದಿರುತ್ತದೆ. ಮನುಷ್ಯನು ಅದರಂತೆ ಬಳಸಿದರೆ ಅದರ ಶಿಕ್ಷೆ ಹೆಚ್ಚು ಕಠಿಣವಾಗುವುದು. ಯಾವುದರಿಂದ ಹಝ್ರತ್ ರಸೂಲುಲ್ಲಾಹ್(ಸ) ನಿಷೇಧಿಸಿದ್ದಾರೆ. ಅದರ ಉಪದೇಶದಿಂದ ಕಡಿಮೆ ದರ್ಜೆಯ ಶಿಕ್ಷೆ ದೊರೆಯುವುದು. ಆದರೆ ಎರಡೂ ಅಪರಾಧ ಶಿಕ್ಷೆಗೆ ಅರ್ಹವಾಗಿವೆ ಮತ್ತು ಅಲ್ಲಾಹನ ಅಸಂತುಷ್ಟಿಗೆ ಕಾರಣವಾಗುವುದು. ಹರಾಮ್ ಕರ್ಮದಿಂದ ಮನುಷ್ಯನ ವಿಶ್ವಾಸದ ಮೇಲೆ ಪ್ರಭಾವ ಬೀಳುತ್ತದೆ. ಮತ್ತು ಅದರ ಪರಿಣಾಮ ನಿಶ್ಚಯವಾಗಿಯೂ ಕೆಟ್ಟದಾಗಿರುತ್ತದೆ. ಆದರೆ ಇತರ ವಸ್ತುಗಳ ಬಳಕೆಯಿಂದ ಪರಿಣಾಮ ನಿಶ್ಚಿತ ರೂಪದಲ್ಲಿ ಕೆಟ್ಟದ್ದು ಮತ್ತು ಅವಿಶ್ವಾಸ ರೂಪದಲ್ಲಿ ಬರುವುದಿಲ್ಲ. ಅಂದ ಹಾಗೆ ನೋಡಿಕೊಳ್ಳಿ. ಮುಸಲ್ಮಾನರಲ್ಲಿ ಕೆಲ ಪಂಥದವರು ವಿವಿಧ ವಿಶ್ಲೇಷಣೆಗಳನ್ನು ನೀಡಿ ಆ ವಸ್ತುಗಳನ್ನು ಬಳಕೆ ಮಾಡಿಕೊಳ್ಳುತ್ತಾರೆ ಮತ್ತು ತಿನ್ನುತ್ತಾರೆ. ಉದಾಹರಣೆಗೆ ಮಾಲಿಕಿ ಅದರ ಪರಿಣಾಮ ಅವರ ವಿಶ್ವಾಸದ ಮೇಲೆ ಆಗುವುದಿಲ್ಲ. ಅವರಲ್ಲಿ ಅವಿಶ್ವಾಸ ಮತ್ತು ಪಾಪ ಬರುವುದಿಲ್ಲ. ಬದಲು ಗತಕಾಲಗಳಲ್ಲಿ ಸಜ್ಜನರು (ಅನ್‌ಲಿಯಾ ಅಲ್ಲಾಹ್) ಸಹ ಜನ್ಮ ತಾಳಿದ್ದಾರೆ. ಆದರೆ ಹಂದಿ ಮಾಂಸ ಅಥವಾ ಸತ್ತ ಪ್ರಾಣಿ ತಿನ್ನುವವ ಯಾವ ವ್ಯಕ್ತಿಯೂ ಅಲ್ಲಾಹನ ದೃಷ್ಟಿಯಲ್ಲಿ ಸಜ್ಜನನಾಗುವುದಿಲ್ಲ. ಅಂದ ಹಾಗೆ ಪಾವಿತ್ರ್ಯತೆಗೂ ದರ್ಜೆಗಳಿವೆ. ಆ ನಾಲ್ಕು ಹರಾಮ್ (ಧರ್ಮನಿಷಿದ್ಧ) ವಸ್ತುಗಳ ಹೊರತು ಉಳಿದ ಎಲ್ಲಾ ನಿಷೇಧಿತ ವಸ್ತುಗಳು (ಮಮ್ನುಅ ವಸ್ತುಗಳು) ಅದನ್ನು ಸಾಮಾನ್ಯ ರೀತಿಯಲ್ಲಿ ಹರಾಮ್ ಎನ್ನುತ್ತಾರೆ. ಆದರೆ ಖುರ್‌ಆನ್ ಪ್ರಕಾರ ಅವು ಹರಾಮ್ ಅಲ್ಲ. (ತಫ್ಸೀರ್ ಕಬೀರ್ ಸಂ 2, ಪುಟ 340).

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

Postal Reg. No: 3000039689/2020-22 Vol No.02, Thursday, 02 September 2021, Issue No. 35

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 34ರ ವರದಿಯ ಉಳಿದ ಭಾಗ)**

* ಅನಂತರ ಅವರೇ ಪ್ರಶ್ನಿಸಿದರು. ನಿಮ್ಮ ಜಮಾಅತಿನ ಸಂಖ್ಯೆ ಎಲ್ಲಿ ಹೆಚ್ಚಾಗಿದೆ? ಆಗ ಹುಝೂರ್ ನುಡಿದರು. ಪಾಕಿಸ್ತಾನದಲ್ಲಿ ಹೆಚ್ಚಿದೆ. ಅದೇ ರೀತಿ ಆಫ್ರಿಕಾ ದೇಶಗಳಲ್ಲೂ ಸಂಖ್ಯೆ ಹೆಚ್ಚಿದೆ. ಘಾನದಲ್ಲಿ ಲಕ್ಷಗಳ ಸಂಖ್ಯೆಯಲ್ಲಿ ಅಹ್ಮದಿಯರಿದ್ದಾರೆ. ಅಲ್ಲಾಹನು ಯಾರಿಗೆ ಭಾಗ್ಯ ಕರುಣಿಸುವನೋ ಅವನು ಸ್ವೀಕರಿಸುತ್ತಾನೆ. ನಾವು ಎಲ್ಲ ಕಡೆ ಸಂದೇಶ ತಲುಪಿಸುತ್ತಿದ್ದೇವೆ. ಅಲ್ಲಾಹನು ಬಯಸುವವರಿಗೆ ಹಿದಾಯತ್ (ಮಾರ್ಗದರ್ಶನ) ನೀಡುತ್ತಾನೆ. ಅವರು ಜಮಾಅತಿನಲ್ಲಿ ಶಾಮೀಲಾಗುತ್ತಾರೆ. ನಮ್ಮ ಪ್ರಾರ್ಥನೆಯೇನೆಂದರೆ. ಅಲ್ಲಾಹನು ಎಲ್ಲರ ಹೃದಯಗಳನ್ನು ತೆರೆಯಲಿ ಮತ್ತು ಜನರು ಹಝ್ರತ್ ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗೆ ಅನುಗುಣವಾಗಿ ಮಸೀಹ ಮಹದಿಯವರನ್ನು ಸ್ವೀಕರಿಸುವಂತಾಗಲಿ.

* ಅತಿಥಿಯೊಬ್ಬರು ಪ್ರಶ್ನಿಸಿದರು. ಮುಸ್ಲಿಮ್ ರಾಷ್ಟ್ರಗಳಲ್ಲಿ ಜಮಾಅತಿನ Centre ಅಥವಾ ಕೇಂದ್ರ ಏಕಿಲ್ಲ?

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ನುಡಿದರು.

ಹಝ್ರತ್ ರಸೂಲುಲ್ಲಾಹ್(ಸ) ಮಹದಿಯರ ಆಗಮನ ಕುರಿತು ನುಡಿಯುವಾಗ ಅರಬಿಯರಲಿ ಆಗಮಿಸುವನು ಎಂದು ಹೇಳಿರಲಿಲ್ಲ. ಅವರು **"ವ ಆಖರೀನ ಮಿಹುಮ್ ಲಮ್ಮಾ ಯಲ್‌ಹಖೂ ಬಿಹಿಮ್"** ವಚನ ಪಠಿಸುತ್ತಿರುವಾಗ ಓರ್ವ ಸಹಾಬಿ ಕೇಳಿದರು. ಇವರು ಯಾವ ಜನರಾಗಿದ್ದಾರೆ. ದರ್ಜೆಯಲ್ಲಿ ಅಂತೂ ಸಹಾಬರ ಸಮಾನವಿದೆ. ಆದರೆ ಇನ್ನು ಅವರಲ್ಲಿ ಶಾಮೀಳಾಗಲಿಲ್ಲ. ಆ ಸಂದರ್ಭದಲ್ಲಿ ಹಝ್ರತ್ ರಸೂಲುಲ್ಲಾಹ್(ಸ) ಹಝ್ರತ್ ಸಲ್ಮಾನ್ ಫಾರ್ಸಿ ಅವರ ಹೆಗಲ ಮೇಲೆ ಕೈಯನ್ನಿಟ್ಟು ಹೇಳುತ್ತಾರೆ. ಒಂದು ವೇಳೆ ವಿಶ್ವಾಸವು (ಈಮಾನ್) ಕೃತ್ತಿಕಾ (ಸುರಯ್ಯಾ) ನಕ್ಷತ್ರ ಬಳಿ ತಲುಪಿದರೂ ಅಂದರೆ ಭೂಮಿಯಿಂದ ಎತ್ತಲ್ಪಟ್ಟರೂ, ಆ ಜನರಿಂದ ಕೆಲ ಜನರು ಅದನ್ನು ಮರಳಿ ತರುವರು. ಅಂದರೆ ಹಝ್ರತ್ ಸಲ್ಮಾನ್ ಫಾರ್ಸಿ ಅರಬೇತರರಾಗಿದ್ದರು. ಅದರಲ್ಲಿ ಯಾವ ಭವಿಷ್ಯವಾಣಿ ಅಡಗಿತ್ತೆಂದರೆ ಆಗಮಿಸಬೇಕಾದ ಮಸೀಹ ಮಹದಿ ಅರಬರಲ್ಲಿ ಸೇರಿದವರಾಗಿರುವುದಿಲ್ಲ.

ಅಲ್ಲಾಹನು ಅರಬರಿಗೆ ಅನುಗ್ರಹಿಸಿದ್ದ ಖಿಲಾಫತ್ ಅನುಗ್ರಹವನ್ನು ಅವರ ದುಷ್ಕರ್ಮಗಳಿಂದಾಗಿ ಕಸಿದುಕೊಂಡನು. ಅರಬರು ಆ ಅನುಗ್ರಹ ಕಳೆದುಕೊಂಡರು. ಆದುದರಿಂದ ಅಲ್ಲಾಹನು ಇತರ ದೇಶಗಳಲ್ಲಿ ಮಹದಿಯನ್ನು ಕಳುಹಿಸಿದ್ದಾನೆ. ಅದೇ ಕಾರಣದಿಂದ ಮುಸ್ಲಿಮ್ ರಾಷ್ಟ್ರಗಳು ಆಗಮಿಸಿದ್ದ ಮಹದಿಯನ್ನು ಸ್ವೀಕರಿಸುತ್ತಿಲ್ಲ ಮತ್ತು ಅಹ್ಮದಿಯರಾದ ನಮಗೆ ತಪ್ಪುಗಾರರೆನ್ನುತ್ತಾರೆ. ನಮ್ಮೊಡನೆ ಈ ವಿಷಯದಲ್ಲಿ ಚರ್ಚಿಸುವುದಿಲ್ಲ. ಬದಲು ತಮ್ಮ ಉಲಮಾಗಳ ಕೈಗಳಲ್ಲಿ ಕೈಗೊಂಬೆಯಾಗಿದ್ದಾರೆ. ಅವರ ಮೌಲ್ವಿಗಳು ಪವಿತ್ರ ಖುರ್‌ಆನ್‌ನ ವಚನಗಳ ಮತ್ತು ಇಮಾಮ ಮಹದಿಯರ ಆಗಮನ ಕುರಿತು ಹಝ್ರತ್ ರಸೂಲುಲ್ಲಾಹ್(ಸ) ಅಧ್ಯಾಪನೆಗಳನ್ನು ಹೇಗೆ ವ್ಯಾಖ್ಯಾನ ಮಡುತ್ತಾರೋ ಅದೇ ರೀತಿ ನಡೆಯುತ್ತಾರೆ.

ಪಾಕಿಸ್ತಾನ ಮತ್ತು ಇಂಡೊನೇಷಿಯಾ ಮುಸ್ಲಿಮ್ ರಾಷ್ಟ್ರಗಳಾಗಿವೆ. ಇಲ್ಲಿ ಲಕ್ಷಾಂತರ ಅಹ್ಮದಿಯರಿದ್ದಾರೆ. ಇಂಡೋನೇಷಿಯಾದಲ್ಲಿ ಒಂದು ದೊಡ್ಡ ಸಂಖ್ಯೆ ಹೊಂದಿದೆ. ನಮ್ಮ ಕೆಲಸ ಪ್ರಚಾರ ಮಾಡುವುದಾಗಿದೆ. ದೈವಿಕ ಸಂಘಟನೆಗಳು ಸಂದೇಶ ತಲುಪಿಸುತ್ತದೆ ಮತ್ತು ಪ್ರಗತಿ ಹೊಂದುತ್ತವೆ. ನಮ್ಮ ಒಂದು ಅರಬಿ ಚಾನಲ್ ಇದೆ. MTA-3, ಎಲ್ಲಾ ಕಾರ್ಯಕ್ರಮಗಳು ಅರಬಿಯಲ್ಲಿ ಬಿತ್ತರಗೊಳ್ಳುತ್ತವೆ. ಪ್ರತಿವರ್ಷ ಅರಬ್ ದೇಶಗಳಿಂದಲೂ ಜನರು ಅಹ್ಮದಿಯತ್ತಿಗೆ ಸೇರುತ್ತಿದ್ದಾರೆ.

* ಮಿತ್ರರೊಬ್ಬರು ಪ್ರಶ್ನೆ ಕೇಳಿದರು ನಾನು ಅಹ್ಮದಿಯಾಗಿದ್ದೇನೆ. ಮೊದಲ ಬಾರಿಗೆ ಬಂದಿರುತ್ತೇನೆ. ಮೆಸೆಡೋನಿಯಾದಲ್ಲಿ ತುಂಬಾ ಸಮಸ್ಯೆಗಳಿವೆ. ಮೆಸೆಡೋನಿಯಾದಲ್ಲಿ ಅಹ್ಮದಿಅತ್ ಬೆಳೆಯಲು ದುಆ ಮಾಡಿ.

ಆಗ ಹುಝೂರ್ ನುಡಿದರು. ನಾವು ಪ್ರಚಾರ ಮಾಡುತ್ತೇವೆ. ಹಾಗೂ ದುಆ ಸಹ ಮಾಡುತ್ತೇವೆ. ಬಾಕಿ ಎಲ್ಲೆಲ್ಲಿ ನಿರ್ಬಂಧವಿದೆಯೋ ಅಲ್ಲಿ ಪ್ರಯತ್ನ ಸಹ ಮಾಡುತ್ತೇವೆ. ಅಲ್ಲಾಹನು **ಇಹ್ದಿನಸ್ಸಿರಾತಲ್ ಮುಸ್ತಖೀಮ** ಎಂದು ದುಆ ಕಲಿಸಿಕೊಟ್ಟಿದ್ದಾನೆ. ಅಲ್ಲಾಹನಲ್ಲಿ ದುಆ ಮಾಡಬೇಕಾಗಿದೆ, ಸರಿಯಾದ ಮಾರ್ಗವಿದ್ದರೆ ಮಾರ್ಗದರ್ಶನ ನೀಡಲಿ ಮತ್ತು ಸ್ವೀಕರಿಸುವ ಭಾಗ್ಯ ದಯಪಾಲಿಸಲಿ ಎಂದು, ಮೆಸೆಡೋನಿಯಾ ಅಹ್ಮದಿಯರಿಗೆ ಸರಕಾರದ ಈ ನಿರ್ಬಂಧನೆಗಳನ್ನು ದೂರವಾಗುವಂತೆ ದುಆ ಮಾಡಬೇಕಾಗಿದೆ. ಮಾರ್ಗಗಳಲ್ಲಿ ಅಡಚಣೆ ಉಂಟು ಮಾಡುವಂತಹ ಯಾವ ಪ್ರವಾದಿಯು ಆಗಮಿಸಲಿಲ್ಲ. ಅಡಚಣೆಗಳು ಉಂಟಾಗುತ್ತವೆ. ಆದರೆ ದೂರವಾಗುತ್ತವೆ. ನೀವು ದುಆ ಮಾಡಿರಿ.

* ಅತಿಥಿಯೊಬ್ಬರು ಹೇಳಿದರು. ರಾಜಕೀಯದೊಂದಿಗೆ ನನ್ನ ಸಂಬಂಧವಿದೆ, ಯಾವುದೇ ಸಮಸ್ಯೆಯಿದ್ದಲ್ಲಿ ಅದನ್ನು ಪರಿಹರಿಸುವ ಭರವಸೆ ನಾನು ನೀಡುತ್ತೇನೆ.

ಆಗ ಹುಝೂರ್ ಹೇಳಿದರು. ವಿಶ್ವಾಸಿಗರ ಕರ್ತವ್ಯವಾಗಿದೆ. ತಮ್ಮ ಕರ್ತವ್ಯಗಳನ್ನು ಪ್ರಮಾಣೀಕತೆಯಿಂದ ಪಾಲಿಸಬೇಕು. ಅಂದ ಹಾಗೆ ತನ್ನ ನಾಗರಿಕರ ಹಕ್ಕುಗಳನ್ನು ಪಾಲಿಸಲು ಪ್ರಯತ್ನಪಡುತ್ತೀರಿ. ಅಲ್ಲಾಹನು ತನ್ನ ಅನುಗ್ರಹಗಳ ವಾರಸುದಾರನಾಗುವಂತೆ ದಯಪಾಲಿಸುವನು.

* ನವ ಅಹ್ಮದಿ ಮಿತ್ರರೊಬ್ಬರು ಹೇಳಿದರು. ನಾನು ನಿನ್ನೆ ಅಷ್ಟೇ ಬೈಅತ್ ಮಾಡಿ, ಜಮಾಅತ್ತಿಗೆ ಸೇರಿದ್ದೇನೆ. ನಮ್ಮ ಅಹ್ಮದಿಯರ ಗುಂಪಿಗೆ ಶಿಫಾಅತ್ ಮಾಡುವವರು ಯಾರು.

ಈ ಪ್ರಶ್ನೆಯ ಉತ್ತರವಾಗಿ ಹುಝೂರ್ ನುಡಿದರು. ಶಿಫಾಅತ್ ಮಾಡುವ ಹಕ್ಕು ಅಲ್ಲಾಹನು ನಬಿ ಕರೀಂ(ಸ) ರವರಿಗೆ ನೀಡಿರುವನು. ಅಹ್ಮದಿಯರು ಮುಸಲ್ಮಾನರಾಗಿದ್ದಾರೆ, ನಾವು ಸಾತ್ವಿಕರಾಗಿದ್ದೇವೆ. ಪವಿತ್ರ ಖುರ್‌ಆನ್ ನಿರ್ದೇಶನಗಳ ಮೇಲೆ ನಡೆಯುತ್ತಿದ್ದೇವೆ. ಹಝ್ರತ್ ರಸೂಲುಲ್ಲಾಹ್(ಸ) ರವರು ನಿರ್ದೇಶಿಸಿದಂತೆ ನಡೆಯುತ್ತಿದ್ದೇವೆ. ಅಂದಹಾಗೆ ಇವೆಲ್ಲ ಸತ್ಕರ್ಮಗಳು ಸ್ವರ್ಗದ ವಾರಸುದಾರರಾಗಿ ಮಾಡಬಲ್ಲದು.

ಉಳಿದದ್ದು ಶಿಫಾತ್ತಿನ ಹಕ್ಕು ಕೇವಲ ನಬಿ ಕರೀಂ(ಸ) ರವರಿಗೆ ಅಲ್ಲಾಹನು ತನ್ನ ಅಪೇಕ್ಷೆ ಮೇರೆಗೆ ನೀಡಿರುವನು. ನಾವು ಹಝುರತ್ ರಸೂಲುಲ್ಲಾಹ್(ಸ) ರವರನ್ನು ಅಂತಿಮ ಪ್ರವಾದಿ ಎಂದು ನಂಬುತ್ತೇವೆ. ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ನುಡಿದರು ನಾನು ಹಝ್ರತ್ ರಸೂಲುಲ್ಲಾಹ್(ಸ) ರವರ ಸೇವಕನ ನೆಲೆಯಲ್ಲಿ ಬಂದಿರುವೆನು. ನಾನು ಏನೆಲ್ಲ ಗೌರವಗಳನ್ನು ಪಡೆದಿರುವೆನು. ಅದು ಅವರ ಶಿಷ್ಯನಾಗಿ (ಗುಲಾಮನಾಗಿ) ಪಡೆದಿರುವೆನು. ಎಲ್ಲವು ಅವರಿಂದಲೇ ಪಡೆದಿರುವೆನು.

**(ಮುಂದುವರಿಯುವುದು)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800-103-2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.